ಕೊರವಂಜಿ



Koravan

ಮೇ
೧೯೫೭

ಸಂಪಾದಕರು :
ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಅ. ರಾ. ಸೇ.
ಶ್ರೀ|| ಕೇಫ
ಶ್ರೀ|| ನಾ ಕ
ಶ್ರೀ|| ರಾಮಿ
ಶ್ರೀ|| ಕಾಮತ್
ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ

ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲ್ಪಡುತ್ತಿದೆ.



ವಿಜಯಾರವರ—

ಮಾಯಾ ಬಜಾರ್

ನಾಗೇಶ್ವರರಾವ್ - ಜಮಿನಿ ಗಣೇಶನ್ - ರಂಗರಾವ್ - ರೇಲಂಗಿ
ಎನ್. ಟಿ. ರಾಮರಾವ್ - ತಂಗವೇಲು - ಸಾವಿತ್ರಿ ಮತ್ತಿತರರು.

★

ಬೆಂಗಳೂರು :	ದಾವಣಗೆರೆ :	ಚಿತ್ರದುರ್ಗ :	ಶಿವಮೊಗ್ಗ :
ಸ್ಟೇಟ್ಸ್	**ಅಶೋಕ**	**ಯೂನಿಯನ್**	**ಕೃಷ್ಣ**
ಮಂಗಳೂರು :	ಕೆ. ಜಿ. ಎಫ್. :	ಮೈಸೂರು :	ಬೆಂಗಳೂರು ಸಿವಿಲ್ ಏರಿಯ
[illegible] ಚಿತ್ರ	**ಕೃಷ್ಣ**	**ಪ್ರಭುವೇವ**	**ಲಕ್ಷ್ಮಿ**

★

ನಿರ್ಮಾಪಕರು :
ನಾಗಿರೆಡ್ಡಿ—ಚಕ್ರಪಾಣಿ.


ನಿರ್ದೇಶನ:
ಕೆ. ವಿ. ರೆಡ್ಡಿ, B.Sc., (Hons.)

A V. T. D. RELEASE

26–4–57ರಿಂದ ಅಮೋಘ ಪ್ರದರ್ಶನ

"ರೋಜುಲು ಮಾರಾಯಿ" ಚಿತ್ರವನ್ನು ಜನತೆಗರ್ಪಿಸಿದ

ಸಾರಥಿಯವರ ಸಾಮಾಜಿಕ ಚಿತ್ರ



ಪೆದ್ದರಿಕಾಲು

[ತೆಲುಗು]

— ತಾರಾಗಣ —

ಅಂಜಲಿ, ಗಿರಿಜ, ರಾಗಿಣಿ, ರೇಲಂಗಿ, ಜಗ್ಗಯ್ಯ, ಗುಮ್ಮಡಿ, ಪೆರುಮಾಳ್
ಡಾ॥ ಗೋವಿಂದರಾಜುಲು, ಹೇಮಲತ, ಲೀಲಾಬಾಯಿ,
ಸೀತಾರಾಂ, ಮಾಸ್ಟರ್ ಉದಯಭಾಸ್ಕರ್.

ನಿರ್ದೇಶನ: **ತಾಪಿ ಚಾಣಕ್ಯ**

ಬೆಂಗಳೂರು: **ಜೈಹಿಂದ್ - ಶಾರದಾ - ರೂಪಮಹಲ್**

ಚಿತ್ರಮಂದಿರಗಳಲ್ಲಿ

ಹಂಚಿಕೆ:

ವಿಕ್ರಮ್ ಪಿಕ್ಚರ್ಸ್

ಗಾಂಧಿನಗರ – – ಬೆಂಗಳೂರು-೯.

ಕೊರವಂಜಿ

A. ANANTHIAH

ಸಂಪುಟ ೧೭ ಮೇ ೧೯೫೭ ಸಂಚಿಕೆ ೨

ಕುಹಕಿಡಿಗಳು

ಭಾರತದ ಪ್ರೆಸಿಡೆಂಡರೂ, ಉಪಪ್ರೆಸಿಡೆಂಟರೂ ಸರ್ವಶ್ರೀಗಳ ಒಮ್ಮತದಿಂದ ಆಯ್ಕೆಯಾದರಂತೆ.

—ನೆಹ್ರೂರವರ ಇಷ್ಟದಂತೆ!

* * *

ಕೇರಳದಲ್ಲಿ ಮೇ ಒಂದನೇ ತಾರೀಖಿನಿಂದ ನಯಾ ರೂಬಲ್ ಜಾರಿಗೆ ಬರುತ್ತದೆಂಬುದು ಶುದ್ಧ ಸುಳ್ಳಂತೆ.

* * *

ಮುಸುರೆ ಕೆಲಸಮಾಡುವಾಕೆಗೆ ಸಿಡುಬು ಎದ್ದಿದೆ ಎಂದು ತಿಳಿದ ಕ್ಷಣದಲ್ಲೇ ಮನೆ ಯಜಮಾನನು ದೇವಿ ಹಾಕಿಸಿಕೊಳ್ಳಲು ಓಡಿಹೋದನಂತೆ.

* * *

ಚಿನ್ನದಗಣಿ ರಾಷ್ಟ್ರೀಕರಣವಾದಮೇಲೂ ಚಿನ್ನದ ಇಟ್ಟಿಗೆಗಳ ವ್ಯಾಪಾರ ನಿಲ್ಲಲಿಲ್ಲ ಎಂದೇ ಕೂಗು!

—ಕೂಸು ಸತ್ತರೂ ಸೂತಕ ಹೋಗಲಿಲ್ಲ!!

* * *

ಕೇರಳದ ಮಾನಸೈಟ್ ಬಲು ಅಪಾಯವಾರಿ, ಭಾವೀ ವಂಶಗಳನ್ನೇ ಕೆಡಿಸ ಬಹುದು ಎಂದು ಅಮೇರಿಕಾದ ಅಣು ವಿಜ್ಞಾನಿ ಅಂದಿದ್ದಾನೆ.

—ಅದಕ್ಕೇ ಇರಬೇಕು! ಕೇರಳದವರು ಈಗ ಭಾರತದಲ್ಲೆಲ್ಲೂ ದೊಡ್ಡ ಚಿಕ್ಕ ಪುಟ್ಟ ಕೆಲಸಗಳಿಗೆಲ್ಲಾ, ಹಾಜರಾಗುತ್ತಿರುವುದು! — ಬುದ್ಧಿ ಭಾತಿ ಬಲು ಹೆಚ್ಚಿರು ವುದಕ್ಕೂ ಇದೇ ಕಾರಣವಿರಬಹುದೇ?

* *

ಕುಮಾರಿ ಕಾಲೇಜಿನವರು ನೆಹ್ರೂರವರಿಗೆ "ಕಾಶ್ಮೀರ ನಮ್ಮದು" ಎಂದು ಠರಾವುಮಾಡಿ ಕಳಿಸಿದ್ದಾರಂತೆ.

—ಕಾರಣ! ಕಾಶ್ಮೀರ ರೇಷ್ಮೆಸೀರೆಗಳು ಸುಲಭ ದರದಲ್ಲಿ ದೊರೆಯಬಹುದು ಎಂಬ ಭರವಸೆಯ ಮೇಲಂತೆ!

* * *

ಚಾಳಚುನಾವಣೆಯ ಫಲಿತಾಂಶವನ್ನು ನೋಡಿದಮೇಲೆ, ಪುಣ್ಯ-ವಂತನೆಂದೆ ನಿಸಿಕೊಳ್ಳಬಹುದು ; ಪುಣ್ಯಾತ್ಮ ಎಂದು ಬೈಸಿಕೊಳ್ಳಬಹುದು ;-ಆದರೆ ಪುಣ್ಯ-ಮತಿ ದೊರೆಯಬೇಕಾದರೆ ಪೂರ್ವ-ಪುಣ್ಯಇರಲೇಬೇಕು ಎಂದರಂತೆ, ಅರಿತ ಜ್ಯೋತಿಷ್ಕರು!!

* * *

ಅತೀ ದೊಡ್ಡದಾದ ಧೂಮಕೇತುವು ಇನ್ನುಮೇಲೆ ಕಾಣಿಸಿಕೊಳ್ಳುವುದಂತೆ.

—ಚುನಾವಣಾ ಸಮಯಕ್ಕೆ ಬಂದಿದ್ದರೆ, ನಮ್ಮ ಪಾರ್ಟಿಯೇ ಇದನ್ನು ತರಿಸಿದ್ದು ಎಂದು ಹೇಳಿಕೊಳ್ಳಲು ಸಹಾಯವಾಗುತ್ತಿತ್ತು!!

* * *

ಆಳುವ ಪಕ್ಷದ ಆಯ್ಕೆಯಾದ ನಾಯಕರನ್ನು ಅಭಿನಂದಿಸಲು ಹೋದಾಗ ಆತ ತಕ್ಕಡಿಯನ್ನು ಕೈಯಲ್ಲಿಟ್ಟುಕೊಂಡು ಹತ್ತಿರದಲ್ಲಿದ್ದ ಬುಟ್ಟಿಯಿಂದ, ವಟಗುಟ್ಟುವ ಕಪ್ಪೆಗಳನ್ನು ಆರಿಸಿ, ತೂಕಮಾಡಲೆತ್ನಿಸುತ್ತಿದ್ದುದನ್ನು ಕಂಡೆ, ಎಂದು ವರದಿಗಾರರು ವರದಿ ಒಪ್ಪಿಸಿದ್ದಾರೆ!!

* *

ಡಿಸ್ಟ್ರಿಕ್ಟ್ ವೈದ್ಯಾಧಿಕಾರಿಗಳೊಬ್ಬರ, ಸರ್ಕಾರಕ್ಕೆ ಅರ್ಜಿ ಬರೆದಿದ್ದಾರಂತೆ.— ಮೋಟಾರ್ ಕೊಳ್ಳಲು ನೀವು ಕೊಡುವ ಮುಂಗಡಕ್ಕೆ ಬದಲಾಗಿ, ಎಂಟು ಎಮ್ಮೆ ಕೊಳ್ಳಲು ಮುಂಗಡ ಕೊಟ್ಟರೆ, ಖರ್ಚೂ ಕಡಿಮೆಯಾಗಿ, ಎಮ್ಮೆಗಳಿಂದ ಜೀವನ ನಡೆಸಿಕೊಳ್ಳಲು ಸಾಧ್ಯವಾಗುತ್ತೆ! ನೀವು ಕೊಡುವ ಪಗಾರದಿಂದ ಅಸಾಧ್ಯ" ಎಂದು!!

—ಇದು ಇನ್ನೂ ನಿರಾಧಾರವಾದುದಂತೆ!

——o——

ಉರಿಗಾಳಿ

ಜೋರ್ಡಾನಿನ ಸುತ್ತ ಈಗ ಹಿರಿಯ ತೋಳಗಳು ಹಲ್ಲು ಮಸೆಯುತ್ತಿರುವ ಕಾರಣ ಕಾಶ್ಮೀರ ಸದ್ಯಕ್ಕೆ ಸುರಕ್ಷಿತ ಎಂದೆನ್ನಬಹುದೇ?

*　　　*　　　*

ಕೇರಳದಲ್ಲಿ—ಇನ್ನು ಮೇಲೆ ನಾರೀಕೇಳಗಳು ಕೆಂಪಾಗಿರುತ್ತವೆಂಬುದು ಶುದ್ಧ ಸುಳ್ಳಂತೆ.

*　　　*　　　*

ಪಶ್ಚಿಮ ಜರ್ಮನಿಗೆ ರಷ್ಯಾವು ಮೈತ್ರೀಯ ಸಲಹೆ ಇತ್ತಿದೆಯಂತೆ—ಅಣು ಶಸ್ತ್ರಗಳನ್ನು ಇರಿಸಿಕೊಳ್ಳಬೇಡಿ, ಹಾಗಾಗದಿದ್ದರೆ ಇಡೀ ದೇಶವೇ ಮರುಸ್ಮಶಾನವಾಗಬಹುದು" ಎಂದು.

—ಅತ್ತೆ ಸೊಸೆಗೆ ಬುದ್ಧಿವಾದ ಹೇಳುವ ರೀತಿ. ಮಗನಮೇಲೆ ಪೂರ್ಣಸ್ವಾಮ್ಯ ನಿನ್ನದು ಎಂದೆನ್ನಬೇಡ, ಇತ್ಯಾದಿ.

*　　　*　　　*

ಜೂಜಿನ ಕುದುರೆಗಳ ಭವಿಷ್ಯ ಚಿಂತಾಜನಕವಾಗಿದೆಯಂತೆ.

—ಅವುಗಳ ಹಿಂಬಾಲೀಕರ ಪಾಡೂ ತದ್ರೀತೀ!

*　　　*　　　*

ಕೀರ್ತಿಶೇಷ ಸ್ವಾಮಿ ವಿವೇಕಾನಂದರ ಚಿತ್ರದಡಿಯಲ್ಲಿ ಅವರ ಉಕ್ತಿಯನ್ನು ಅಚ್ಚೊತ್ತಿ ನಂತರ ಇಂತಹ ಬಿಸ್ಕತ್ತನ್ನೇ ಕೊಳ್ಳಿ ಎಂದು ಜಾಹೀರಾತುಮಾಡಿದ್ದಾರೆ.

*　　　*　　　*

ಚರಕ ಗ್ರಾಮದಲ್ಲಿ ನೆಹ್ರೂಜಿಯವರು ವಿಶ್ರಾಂತಿ ಪಡೆದರಂತೆ.

—ಚರಕ ಹಿಡಿದುಕೊಂಡೇ ಮನಸ್ಸಿನಲ್ಲಿ ಮುಂದಿಗೆ ಮೆಲ್ಲೋದು ನಾವೂನೂ.

*　　　*　　　*

ಕನ್ಯೆಯೊಬ್ಬಳನ್ನು ಕಿರುಬವೊಂದು ಹಾರಿಸಿಕೊಂಡುಹೋಯಿತಂತೆ (ಸುದ್ದಿ)

—ಅಳಿಯಂದಿರನ್ನು ಈ ರೀತಿ ವರ್ಣಿಸಬಹುದೇ!

*　　　*　　　*

ಇರುಳು ಕಂಡ ಮಂತ್ರಿಪದವಿ ಹಗಲಿನಲ್ಲೇ ದರೋಡೆಯಾಯ್ತಂತೆ.

* * *

ಪೋರ್ಚುಗೀಸಿನ ಅಧ್ಯಕ್ಷರ ಮಗಳನ್ನು-ಆಫ್ರಿಕಾದ ಬಿಳಿಯಧ್ಯಕ್ಷರ ಮಗನಿಗೆ ಕೊಟ್ಟರೆ, ಇಬ್ಬರೂ ಭಾರತದಮೇಲೆ ಸವಾಲು ಹಾಕಲು ಸುಖವಾಗಬಹುದು ಎಂದು ಯೋಚಿಸುತ್ತಿರುವರಂತೆ—

—ಮಿಸ್ಟರ್ ಹಿಲ್ಡ್ರೆತ್—ಇಸ್ಕಂದರ್ ಮಿರ್ಜಾ—ಇವರ ಸಾಕ್ಷಿ ಕಾಣಿಸಿರ ಬಹುದು ಅಲ್ಲವೇ?

* * *

ಸಿಂಹಳಕ್ಕೆ ಶ್ರೀ ನೆಹ್ರೂರವರು ಪ್ರವಾಸಹೋಗುವರಂತೆ—

—ಈ ಕಾರಣದಿಂದಾದರೂ ಅಲ್ಲಿರುವ ನಮ್ಮವರು ಬಾಳಬಹುದೇನೋ—ಅಥವಾ ಅಗಸನ ಮಾತು ಕೇಳಿ....ಹೆರುಕ್ಕೆ ಸ್ಥಳವಿಲ್ಲದಂತಾಗುತ್ತೇನೋ?

* * *

ಮದ್ರಾಸಿನ ಸಚಿವರಾಗಿರುವ ಶ್ರೀ ವೆಂಕಟರಾಮನ್‌ರವರು ರಾಜಾಜಿಯವರನ್ನು ಭೇಟಿಯಾಗಲಿಲ್ಲವಂತೆ!!

* * *

"ಯೋಗಕ್ಷೇಮಂ ವಹಾಮ್ಯಹಂ" ಎಂದು ನಮ್ಮ ಸರ್ಕಾರ ವಿಮಾಖಾತೆ ಘೋಷಿಸಿದೆ ಕಣೇ! ನಾನು ಬರೀ ಭೋಗಕ್ಷೇಮ ಬಯಸುತ್ತೇನೆ ಕಣೇ! ಎಂದು ನವ ಗಂಡ, ನವ ಹೆಂಡತಿಗೆ ಹೇಳಿದನಂತೆ!!

* * *

ಅರಿಶಿನ ಕುಂಕುಮದ ಮೇಲೆ ಆಕ್ಷೇಪ ಹಾಕಬೇಡಿ; ಮುಖಪುಡಿ, ತುಟಿ ರಂಗಿನಮೇಲೆ ಬೇಕಾದರೆ ಹೆಚ್ಚಿಸಿ, ಎಂದು ಅಹಮದಾಬಾದಿನ ಯುವತಿಯರು ಚಳುವಳಿ ಹೂಡಿದ್ದಾರಂತೆ.

—ಅಂದರೆ ಅವರು ತುಟಿಗೆ ಕುಂಕುಮ ಹಚ್ಚಿಕೊಂಡು, ಚೀಣೀಯರ ಮುಖ ತೋರಬೇಕೆಂದು ಸನ್ನಾಹಮಾಡಿಕೊಂಡಿದ್ದಾರೇನೋ!!

ಕೋಗಿಲೆಗೆ

ತಲೆ ನೋಯುತಿದೆ, ಸುತ್ತಲೆಲ್ಲ ರಣರಣ ಬಿಸಿಲು
ತಳಿತಿಹುದು ಹುಣಿಸೆ ಬಕ ವೃಂದ ಧ್ಯಾನದಲಿಹುದು
ಸುಡುಬಿಸಿಲಿನೊಡಲಿಂದ ಮೂಡಿ ಬಂದಧ್ವಾನ
ವೊಂದು ಕೇಳಿಸುತಲಿದೆ ನಿನ್ನದೇ ಕೋಗಿಲೇ ?
ಏಕಿಂತು ಗೊರಗೊರಿಪೆ ಚಳಿಯೊ ಜ್ವರವೋ ನಿನಗೆ
ತಲೆನೋವೊ ಕಣ್ಣೋವೊ ಬೆರಿಬೆರಿ ಅನೀಮಿಯವೋ ?
ಹೋಳಿಗೆಯು ಹೆಚ್ಚಾಯ್ತೋ ಕಾಫಿ ಸಿಕ್ಕದೆ ಹೋಯ್ತೊ ?

ತಳಿತ ಮರ ಜೋಲುತಿವೆ ಧಗೆಗ್ಮೈ ಸೋಲುತಿದೆ
ಬೆವರ ಸೆಕೆ ನಿತ್ರಾಣ ಝಳದಾಹವಿದ್ದರೂ
ಯಾವ ಮಾಯೆಯೊ ಬಂದು ಜೋಂಪೊಂದು ಆವರಿಸೆ
ಅರೆನಿದ್ದೆಯಿಂದೊರಗಿ ಬಿದ್ದಿಹೆನು ನಾನಿಲ್ಲಿ
ಹೊಡೆದೋಡಿಸುತೆ ಚಿಂತಿ ಬಾ ಬಾರೆ ಎಲೆಶಾಂತಿ
ಗುಣವಂತಿ ಎಂದ ಕವಿಯನು ಹೊಗಳೆ ಸುಪ್ತಮನ

ಅದಕು ಎಡೆಯಿರದಂತೆ ಆ ತೋಪಿನೆಡೆಯಿಂದ
ಕೂಗಿ ಹೊಡೆದೆಬ್ಬಿಸಿದೆ ಎಲೆಲೆಲೇ ಕೋಗಿಲೇ !
ಹಾಡೆಂದು ನಿನ್ನನ್ನು ಬೇಡಿಕೊಂಡವರಾರು.

ಒರಗಿರಲು ನೀನಲ್ಲಿ ಮರದ ಕೊಂಬೆಯ ಮೇಲೆ
ಮುರಿದ ರೇಡಿಯೊ ಹಳೆಯ ಹಾರ್ಮೋನಿಂಗಳ ಜೊತೆಗೆ
ಗಂಟಿ ಚೌಡಿಯರ ಚೌಡಿಕೆ ಬಂದು ಮೇಲ್ಬಿದ್ದು

"ಏಳೇಳು ಪರಭೃತವೆ ನಿನ್ನ ಸರ ಮೃತವೆ
ಏಳೇಳು ಕರಿಹಕ್ಕಿ ಮಲಗದಿರು ಸೊಕ್ಕಿ
ಬಂದಾ ವಸಂತ ಎದೆ ಮೇಲೆ ಕುಂತ
ತಳಿತಿಹುದು ಮಾವು ಕಾತಿಹುದು ಬೇವು.
ಕವಿವೃಂದ ಎಲ್ಲೆಲ್ಲು ಬಡಕೊಳ್ಳಲಾ ಸೊಲ್ಲು
ಕೇಳುತಿಹುದು ಎದೆಯು ಸೀಳುತಿಹುವು :—

ಬಂದೀವಸಂತದಲಿ
ಮಾಂದಳಿರ ಸವಿಯುಂಡು
ಪಂಚಮದಲೀಗಲೇ
ಹಾಡುವುದು ಕೋಗಿಲೇ

ಶಾಂತವರು ಕೂಗುತಿರೆ ಮಲಗುವೆಯ ಕೋಗಿಲೇ
ನಿಂತು ನೀ ಸರವೆತ್ತು ವಿರಹವನು ಕೋಗಿಲೇ
ನೀ-ಕೂಗದಿರೆ ಅವರು ಮರೆತಾರು ಕೋಗಿಲೇ
ಪ್ರೇಮವನೂ ಅದರೊಡನೆ ತೊರೆದಾರು ಕೋಗಿಲೇ"
ಎಂದು ಪುಸಲಾಯಿಸಲು ಮೈಕೊಡವಿ ಕೇಕರಿಸಿ
ಪಾಡುತಿರಬಹುದು ನೀನ್ ಇದು ನಿನಗೆ ತರವಲ್ಲ.
ಕಾಕ ಶಿಷ್ಯಾ ನೀನು, ಪಾಯಸದ ಪಾತ್ರೆಯಾ
ತಳವ ಚುಚ್ಚುಗದಿಂದ ಕೆರೆದಾಗ ಬಹದನಿಯು
ಶೃತಿಗೆ ಹಾಡುತಲಿರುವೆ ಇದು ನಿಜ ಸತ್ಯ.
ಬರಿದೆ ನಿನ್ನನು ಎಂದು ಫಲವೇನು ಕೋಗಿಲೇ
ನಿನ್ನ ಗಂಟಲು ಕೆಟ್ಟು ಹೊಲಸಾಗಿ ಹೋಗಿದೆ
ಸಿನಿಮ ಸಂಗೀತದೊಡ ನೊಂದಾಗಿ ಹೋಗಿದೆ.
ಹಳೆಯ ಹೆಮ್ಮೆಯ ಮರೆತು ಬಾಯ್ಮುಚ್ಚು ಕೋಗಿಲೆ
ಹೊಸ ಕಾಲಕೊಂದು ಹೊಸ ಹಾಡು ತಾ ಕೋಗಿಲೇ.
ನಿನ್ನಂಥ ಸಂಗೀತವನು ಕೇಳಿ ಜಾನ್ ಕೀಟ್ಸ
ಹೃದಯದಲಿ ನೋವು ತಲೆದೋರಿ ಸಾಗಿದ್ದ
ವೈತರಣಿಯೆಡೆಗೆ ಮೋಣಾರಗಳೆ ವರ್ಡ್ಸ್‌ವರ್ತ್
ನಿನಗಿಂತ ಮಲೆನಾಡ ದುಡುಗಿ ಲೇಸೆಂದ
ನಿನ್ನಗೀತೆಯು ಕೇಳಿ ರೇಗಿದಾ ನಿಜಗುಣನು
ಶಂಭುಲಿಂಗನ ನೆನೆಯೆ ಅಣತಿಯನಿತ್ತ.
ಆದರೂ ನಿನ್ನ ಹೊಗಳುವ ಜನರು ಬಹಳಷ್ಟು
ಅವರ ಸುಳ್ಳಾತ ಕೇಳದೆ ತೋರಿಸೋ ಫಿಸ್ಟು
ಆರೊಮ್ಯಾಂಟಿಕರಿಗಾಯ್ತೆಂದೋ ಸಮಾಧಿ
ನವ್ಯ ಕವಿಗಳ ಜೊತೆಗೆ ಕುಳಿಯೊ ಹೊಸಹಾದಿ
ಈಗಲದರಿಂದಲಿಲ್ಲ ಕರಿ ಕರಿಯು ಕೋಗಿಲೇ
ಕೂ ಕ್ರು ವೂ ಕೂ ಕ್ರು ವೂ ಅನ್ನಬೇಡ
ಹಾಡುವೊಡೆ ಹಾಡು ಹೊಸ ಹಾಡ.

—ಅ. ದಾ. ಸೇ.

—o—

ಹಿಂದೆ ಬಿದ್ದವರು-ಮುಂದುವರಿದಿದ್ದು

ನಾನು ರಾಜ ಚಂದಿ ಶಿವಪುರದಿಂದ ಬೆಳಕು ಹರಿಯುಕ್ಕೆಮುಂಚೆಯೇ ಹೊರಟು ತಲಕಾಡು ದಾರಿ ಮುಂದುವರಿಸಬೇಕೆಂದು ನಿರ್ಧರಿಸಿ, ನಾವು ಊಂಡ ಹೋಟೆಲಿನ ವರಾಂಡಾದಲ್ಲಿ ಮಲಗಿದೆವು.

"ವಿಪರೀತ ಜಾಗ್ರತೆ ಏಳೋದು ಬ್ಯಾಡ್ರೋ" ಅಂದ ರಾಜ.

ಹಿಂದೆ, ರಾಜ ಈಜು ಕಲಿಯುಕ್ಕೆ ಮಲ್ಲೇಶ್ವರದ ಸ್ವಿಮ್ಮಿಂಗ್‌ಪೂಲಿಗೆ ಹೋಗುತ್ತಿದ್ದನಂತೆ. ವೆಂಕು ಸಹ ಅದೇ ಪೂಲಿಗೆ ಈಜುಕ್ಕೆ ಬರುತ್ತಿದ್ದ. ರಾಜ ಅಣ್ಣಮ್ಮನ ಗುಡಿ ಬೀದಿಯಿಂದ—ವೆಂಕು ಗುಟ್ಟಹಳ್ಳಿಯಿಂದ ಪೂಲಿಗೆ ಬರುತ್ತಿದ್ದರು. ಇಬ್ಬರಿಗೂ ಪೈಪೋಟಿ ಬಿತ್ತು—ನಾನು ಮೊದಲು ನಾನು ಮೊದಲು ಅಂತ. ಆದರೆ ಪ್ರತಿದಿನ ಹೇಗೋ ಏನೋ ವೆಂಕು ರಾಜನಿಗಿಂತ ಮೊದಲು ಬಂದು ಕುಕ್ಕರಿಸಿರುವ. ಒಂದೊಂದು ಬಾರಿ ರಾಜನಿಗೆ ಸಂಶಯ ಬರುತ್ತಿತ್ತಂತೆ-ಪ್ರಾಯಶಃ ವೆಂಕು ರಾತ್ರಿಯೆಲ್ಲಾ ಪೂಲಿನ ಕಟ್ಟೆಯಮೇಲೆ ಮಲಗಿರಬಹುದೇ—ಅಂತ! ಆದರೆ—ಅಷ್ಟು ಧೈರ್ಯ ರಾಜನ ಸ್ನೇಹಿತರಲ್ಲಿ—ಅಂದರೆ ಆಗಿನ ಸ್ನೇಹಿತರಲ್ಲಿ—ಯಾರಿಗೂ ಇರಲಿಲ್ಲವೆಂದು ಯೋಚಿಸಿ ಈ ಸಂಶಯ ನಿವಾರಿಸಿಕೊಂಡ. ಹೇಗಾದರೂ ಮಾಡಿ ಒಂದು ದಿನವಾದರೂ ತಾನು ವೆಂಕುಗಿಂತಲೂ ಮೊದಲು ಬರಬೇಕೆಂದು ನಿರ್ಧರಿಸಿ ಪ್ರತಿದಿನ ತನ್ನ ನಿದ್ರೆಯನ್ನು ಮೊಟಕುಮಾಡುತ್ತ ಬಂದ. ಒಂದು ರಾತ್ರಿ ನಿದ್ರೆಯಿಂದ ಥಟ್ಟನೆ ಎದ್ದು ಹೊರಗೆ ಬಂದ—ಚಂದ್ರನ ಬೆಳಕು—ಬೆಳಗಿನ ಝಾವವಿದ್ದಹಾಗೇ ಇತ್ತು. ಸರಿ—ಸದ್ದು ಮಾಡದೆ ಟವಲು ಸುತ್ತಿಕೊಂಡು ಮಲ್ಲೇಶ್ವರದಕಡೆ ಓಡುಕ್ಕೆ ಶುರುಮಾಡಿದ. ದಾರಿಯಲ್ಲಿ ಒಂದು ನರಪಿಳ್ಳೆ ಇಲ್ಲ. ಹಾಗೂ ಹೀಗೂ ಮಾಡಿ ತೆಂಗಿನಮರದ ರಸ್ತೆಗೆ ಬರುವಾಗ್ಗೆ—ರಾಜನಿಗೆ ಸ್ವಲ್ಪ ಭಯವೇ ಆಯ್ತಂತೆ. ಆದರೂ ವೆಂಕುಗಿಂತ ಅಂದು ತಾನೇ ಪೂಲಿಗೆ ಮೊದಲು ಸೇರುವ ಧೈರ್ಯ ಬೇರೆ! ಇನ್ನೇನು—ಕೊಳದ ರಸ್ತೆಗೆ ತಿರುಗಬೇಕು—ಅಷ್ಟರಲ್ಲಿ ಯಾರೋ ಒಬ್ಬಾತ ದೊಡ್ಡ ಗಂಟಲಿನಿಂದ—

"ಯಾರದು!?" ಅಂದ ಹಾಗಾಯ್ತು. ರಾಜನ ಕಾಲಡಿಯಿಂದ ತೆಂಗಿನಮರದ ರಸ್ತೆ ಹಾಗೇ ಕಳಚಿಬಿದ್ದಹಾಗಾಯ್ತಂತೆ.

"ಯಾರಯ್ಯಾ ನೀನು?"

ರಾಜ ಕಣ್ಣುಬಿಟ್ಟು ನೋಡಿದ. ಪೋಲೀಸು!

"ನಾ........ನಾ..........ನು"

"ಯಾರು ನೀನು? ಎಲ್ಲಿ ಹೊರಟೆ? ಒಬ್ಬನೇ ಎಲ್ಲಿಗೆ ಹೊರಟೆ? ಯಾವ ಗ್ಯಾಂಗು ನೀನು? ಕನ್ನಕ್ಕೆ ಹೊರಟಿದ್ದೀಯಾ-ಇಲ್ಲಾ-ಖೂನೀಗೋ...ಬೊಗಳು!"

"!!!!!"

"ಬೊಗಳ್ತೀಯೋ ಇಲ್ವೊ?"

ರಾಜ ತೊದಲುಕ್ಕೆ ಶುರುಮಾಡಿದ—"ನಾನು ಕಳ್ಳನಲ್ಲ-ಈಜುಕ್ಕೆ ಹೋಗ್ತಾ ಇದ್ದೀನಿ"

ಆದರೆ ಪೋಲೀಸಿನವ ಇಂತ ಸುಳ್ಳು ಕಥೆಗಳನ್ನು ನಂಬುವವನಲ್ಲ. ತನ್ನ ನಡುವಿನಿಂದ ಬೆಲ್ಟನ್ನು ಬಿಚ್ಚಿದ. ಇನ್ನೇನು—ರಾಜನಿಗೆ ಶಾಸ್ತ್ರವಾಗಬೇಕು-ಅಷ್ಟರಲ್ಲಿ ಗುಟ್ಟಹಳ್ಳಿಯ ಕಡೆಯಿಂದ ಯಾರೋ—ಟವಲು ಧರಿಸಿ ಓಡುತ್ತ ಬಂದಿಳಿದರು.

"ವೆಂಕು!"

"ರಾಜ!"

ಪೋಲೀಸಿನವ-ರಾಜ ವೆಂಕು—ಇಬ್ಬರ ಮಾತನ್ನೂ ನಂಬಲಿಲ್ಲ. ಇಬ್ಬರನ್ನೂ ಅಟ್ಟಿಕೊಂಡು ಠಾಣೆಗೆ ಕರೆದುಕೊಂಡುಹೋಗಿ ಒಂದು ಕೋಣೆಯಲ್ಲಿ ಸೇರಿಸಿ ಭದ್ರ ಪಡಿಸಿದ. ತಮ್ಮ ಕೋಣೆಗೆ ಬೀಗಮುದ್ರೆ ಬೀಳುತ್ತಿರುವಾಗ ಠಾಣೆಯ ಗಡಿಯಾರ 'ಠಣ್ ಠಣ್' ಅಂತ ಎರಡುಬಾರಿ ಹೊಡೆದು ಸುಮ್ಮನಾಯ್ತು-ಅಂತ ಹೇಳಿದ ರಾಜ. ಮಾರನೆಯದಿನ ಮಧ್ಯಾಹ್ನದತನಕ ವಿಚಾರಣೆ ನಡೆಸಿ ಇಬ್ಬರಿಗೂ ಅರ್ಧಜೀವಮಾಡಿ ಬಿಡುಗಡೆಮಾಡಿದರಂತೆ.

ರಾಜ ಈ ಕಥೆಯನ್ನು ಹೇಳಿ ಮುಗಿಸುವ ಹೊತ್ತಿಗೆ ಚಂದಿ ಗೊರಿಕೆಹೊಡಿಯುತ್ತಿದ್ದ. ಬೆಳಿಗ್ಗೆ 5-30ಕ್ಕೆ ಸರಿಯಾಗಿ ಹೊರಟರೆ ಸರಿಹೋಗುತ್ತೆ ಅಂತ ನಿರ್ಧರಿಸಿ ನಾನು ರಾಜ ಮಲಗಿದೆವು.

ಹೋಟಲಿನ ಗಣಪ ನಮ್ಮನ್ನೆಬ್ಬಿಸಿದಾಗ ಸರಿಯಾಗಿ 8-15 ಘಂಟೆ. 10 ಘಂಟೆಗೆ ಶಿವಪುರ ಬಿಟ್ಟೆವು.

ಗಂಗನ ಪಟ್ಟಣ ಸೇರುವಾಗ್ಗೆ ಮಧ್ಯಾಹ್ನವಾಗಿತ್ತು. ಆ ಊರಿನ "ಡೆಲ್ಲಿ ಆನಂದ ಭವನ"ದಲ್ಲಿ ಊಟಮಾಡಿ ಆ ಸಂಕಟವನ್ನು ತುಸಹೊತ್ತು ಸುಧಾರಿಸಿಕೊಂಡು ಮುಂದೆ ಸಾಗೋಣವೆಂದು ಗಂಗನ ಪಟ್ಟಣದ "ನಿಷದ್ ಭಾಗಿ"ಗೆ ನುಗ್ಗಿದೆವು. ಒಂದು ಬಗಿನೀಮರದ ನರಳಿನಲ್ಲಿ ವಾಹನಗಳನ್ನು ಬಿಟ್ಟು ಆರಾಮವಾಗಿ ಕುಳಿತೆವು. ಪಕ್ಕದಲ್ಲಿದ್ದ ತಾಟೀಮರದ ನೆರಳಿನಲ್ಲಿ ಬೇರೆ ಐದುಜನ ಕುಳಿತಿದ್ದರು.

"ಚಂದಿ—ಇಲ್ಲಿ ಸದ್ಯ—ಯಾವ ರಾಜಕೀಯವನ್ನೂ ಎತ್ತಬೇಡ" ಅಂತ ಎಚ್ಚರಿಸಿದೆ.

"ALLRRIGHT!" ಅಂದ.

ಸ್ವಲ್ಪಹೊತ್ತು ಸುಮ್ಮನೆ ಕುಳಿತೆವು.

"ನಿಮ್ಮೂರುಕಡೆ—ಓಟೆಲ್ಲಾ ಆಯ್ತೇ?" ಈ ನಮ್ಮ ಯಾತ್ರೆಯ ಕಥೆಯನ್ನು ಓದುತ್ತಿರುವವರಿಗೆ—ಈ ಪ್ರಶ್ನೆ ಯಾರಿಂದ ಬಂತು ಅಂತ ಹೇಳಬೇಕಾದ್ದಿಲ್ಲ.

ತಾಟೀಮರದ ಕೆಳಗೆ ಕುಳಿತಿದ್ದ ಒಂಭತ್ತು ಕಣ್ಣುಗಳೂ—ಆ ಐವರಲ್ಲಿ ಒಬ್ಬನಿಗೆ ಒಂದು ಕಣ್ಣಿನಲ್ಲಿ ಹೂ ಬಿದ್ದಿತ್ತು—ಒಂಭತ್ತು ಕಣ್ಣುಗಳೂ ನಮ್ಮಕಡೆ ತಿರುಗಿದುವು.

"ಏನಂದ್ರಿ" ಅಂದುವು.

"ನಿಮ್ಮೂರುಕಡೆ ಓಟಿನ ವಿಷಯ ಕೇಳಿದೆವು" ಅಂತ ಬಿಡಿಸಿ ಹೇಳಿದ – ರಾಜ.

ರಾಜನಿಗೆ—ಚಂದಿಯ ಹೆಜ್ಜೆ ಒಂದು ನೆಪ!

ಒಂಭತ್ತು ಕಣ್ಣುಗಳೂ ತಮ್ಮತಮ್ಮನ್ನು ತುಸಹೊತ್ತು ದೃಷ್ಟಿಸಿ ನೋಡಿಕೊಂಡು ಮತ್ತೆ ನಮ್ಮಕಡೆ ತಿರುಗಿದುವು.

"ಏನಂದ್ರಿ?" ಅಂದುವು.

ನನ್ನ ನಾಲಿಗೆಗೆ ತುಸು ತಿಮಿರ ಹತ್ತಿತು.

"ಅಲ್ರಪ್ಪಾ—ಈಗತಾನೇ ನಡೀತಲ್ಲಾ—ಚುನಾವಣೆ—ಅದರಲ್ಲಿ ಮತದಾನ ನಿಮ್ಮಕಡೆ ಯಶಸ್ವಿಯಾಗಿ ನಡೀತೇನಪ್ಪಾ?" ಅಂದೆ.

ಒಂಭತ್ತು ಕಣ್ಣುಗಳೂ ನಿಟ್ಟುಸಿರುಬಿಟ್ಟವು.

"ಆಯ್ತು—ಆಯ್ತು—ಇನ್ಯಾಕ ಸಮಾಚಾರ?"

"ಯಾಕ್ರಪ್ಪಾ—ಹಾಗಂತೀರಿ?"

"ಸ್ವಾಮೀ ನಾವೆಲ್ಲಾ ಮೊದಲು ಮೊದಲು ಭಾಳಾ ಹುಮ್ಮಸ್ಸಿನಲ್ಲಿದ್ವು. ಆದ್ರೆ—ಈ ಓಟನೋರು ಬಂದು ನಮ್ಮನ್ನಗೋಳುಹುಯ್ದಿದ್ದೂ, ಒಬ್ರನೊಬ್ರು ಒಯ್ದಿದ್ದೂ ನೋಡಿ—ಯಾರೂ ಓಟಿಗೆ ಲಾಯಕ್ಕಿಲ್ಲಾಂತ ನಾವು ಮನೇನೇ ಬಿಟ್ಟು ಹೊರಗೆ ಹೋಗ್ಲಿಲ್ಲಾ. ಅಂಗಾಗಿ ನಮ್ಮ ಹಳ್ಳೀಲಿ ಓಟಿನ ಪೆಟ್ಟಿಗೆ ಎಲ್ಲಾ—ಖಾಲಿ" ಅಂದ–ಒಬ್ಬಾತ.

"ಷಹಭಾಸ್!" ಅಂದ ಚಂದಿ.

ನನಗೆ ರೇಗಿತು. ಮತದಾನಮಾಡದೆ ಇರುವವರಿಗೆ ಪ್ರೋತ್ಸಾಹ ಕೊಡುವವ-ಪ್ರಜಾಪ್ರಭುತ್ವದ ಶತ್ರು! (ಇದನ್ನು ಪುನಃ ಓದಿಕೊಳ್ಳಿ—ನಾನು ಹೀಗೆಲ್ಲೋ ಓದಿದ ಜ್ಞಾಪಕ—ಇದು ಸರಿಯಿದ್ದರೂ ಇರಬಹುದು. ತಪ್ಪಿದ್ದರೂ ಇರಬಹುದು).

"ಚಂದಿ! " ಅಂದೆ.

"ಏನಯ್ಯಾ?"

"ಅಲ್ಲಾ—ಇವರು ಓಟುಮಾಡದೆ ಸುಮ್ಮನೆ ಇದ್ದದ್ದು ಸರಿ—ಅಂತೀಯಾ?"

"ಓಹೋ—ಭೇಷಕ್ಕಾಗಿ! ಇವರ ಹಳ್ಳಿಯವರಿಗಿಂತ ಬುದ್ಧಿವಂತ ಮತದಾರರು ನಮ್ಮ ದೇಶದಲ್ಲೇ ಇಲ್ಲವಯ್ಯಾ! ನಾ ಹೇಳೋದಾದ್ರೆ—ಮತದಾರರೆಲ್ಲಾ ಇದೇ ರೀತಿ ಬುದ್ಧಿ ಉಪಯೋಗಿಸಿದರೆ–It may clean up our democracy!" ಅಂದ.

"Hear! Hear!" ಅಂದ ರಾಜ.

ಕೆಲವು ರಾಜಕೀಯ ವಿಷಯಗಳ ಬಗ್ಗೆ ನಾನು ನನ್ನ ಸ್ನೇಹಿತರ ಜೊತೆಯಲ್ಲಿ ಎಂದೂ ವಾದಮಾಡುವುದಕ್ಕೆ ಹೋಗೊಲ್ಲ. ಈಗಲೂ ಹೋಗಲಿಲ್ಲ.

ತುಸಹೊತ್ತು ಅದೂ ಇದೂ ವಿಷಯಗಳನ್ನು ಮಾತನಾಡಿ—ಒಂಭತ್ತು ಕಣ್ಣುಗಳು ಅವರ ದಾರಿ—ನಾವು ನಮ್ಮ ದಾರಿ—ಹಿಡಿದೆವು.

— ಕೇಫ.

ಹಾದಿಯಲ್ಲಿ ಕೇಳಿಸಿದುದು—

"ಏನಯ್ಯ, ಈ ದಶಮಾನ ಪದ್ಧತೀ ಪ್ರಕಾರ ನಾಣ್ಯ, ತೂಕಗಳ ಅಳತೆ ಬದಲಾಯಿಸಿದ್ದರಿಂದ ನಮಗೆ ಉಪಯೋಗವೇನೋ ಆಗಬೋದು—ಆದರೂ—ನನ್ನ ಕೇಳಿದರೆ—10 ದಿನಕ್ಕೆ ಒಂದು ತಿಂಗಳು ಮಾಡಿಬಿಟ್ಟು, 10 ತಿಂಗಳಿಗೆ ಒಂದು ವರ್ಷ ಮಾಡಿಬಿಟ್ಟು, ಈಗ ನಮಗಿರೋ ಸಂಬ್ಳಾನೆಲ್ಲಾ 10 ರಷ್ಟು ಜಾಸ್ತಿ ಮಾಡಿಬಿಟ್ಟು........"

"ಬಾಯಿಮುಚ್ಕೋ—ಘಟ್ಟಿಯಾಗಿ ಹೇಳಬೇಡ—ಯಾರಾದರೂ ನಾಯಕರು ಇದನ್ನ ಕೇಳಿಸಿಕೊಂಡು 100 ದಿನಕ್ಕೆ ಒಂದು ತಿಂಗಳು 1000 ದಿನಕ್ಕೆ ಒಂದು ವರ್ಷ ಮಾಡಿ ಕೂಡಿಸಿಬಿಟ್ಟಾರು!"

— ಕೇಫ.

ಡಿಕ್ಕಿ ಮಣ್ಣು ಮುಕ್ಕಿದ್ದು

"ನಾಯಿಗಳಿವೆ, ಎಚ್ಚರಿಕೆ" ಎಂಬ ಬೋರ್ಡು ನನ್ನ ಮನೆ ಮುಂದೆಯೂ ಇದೆ. ನಾಯಿಗಳಿಲ್ಲ! ಒಂದೇ ಒಂದು ನಾಯಿ ಇರುವುದು, ನನ್ನ ಮನೆಯಲ್ಲಿ. ಅದು ಆ ಬೋರ್ಡಿನ ಪ್ರಕಟಣೆಯಲ್ಲಿನ ಮೊದಲನೆಯ ಸುಳ್ಳು! ಮತ್ತೊಂದು ಸ ಳ್ಳೇನೆಂದರೆ, ನನ್ನ ಮನೆ ನಾಯಿ "ಡಿಕ್ಕಿ", ಯಾವ ಎಚ್ಚರಿಕೆಗೂ ಅರ್ಹತೆ ಪಡೆದಿಲ್ಲ. ಆದರ ಬಾಲ ತುಳಿದರೂ, ಬಾಯಿ ತೆರೆಯುವುದಿಲ್ಲ, ಬಡಪ್ರಾಣಿ!

ನೋಡುವುದಕ್ಕೇನೋ 'ಡಿಕ್ಕಿ', ಪ್ರತಿವಾದಿ ಭಯಂಕರ! ಕಾಲಭೈರವ! ಖಟ್ವಾಂಗ ಭೈರವ! ಕರಡಿ ಕೂದಲು, ತೋಳನ ಮೂತಿ, ಹಾವಿನ ಕಣ್ಣು, ಚೇಳಿನ ಬಾಲ ಎಲ್ಲವೂ ಇವೆ, 'ಡಿಕ್ಕಿ'ಗೆ! ಆದರೆ, ಮೆದುಳು ಮಾತ್ರ ಮಣ್ಣು! ಹೃದಯ ಬೆಣ್ಣೆ!

ಹೀಗೆಯೇ ನಡೆದುಬಂದಿತ್ತು. ಮೊನ್ನೆ ಮಾರ್ಚ್ ೨೨ರ ವರೆಗೆ, ಕೇಂದ್ರ ಸರ್ಕಾರದವರು ಶಕವರ್ಷ ಅಂತ ಘೋಷಿಸಿ, ಚೈತ್ರಮಾಸ ೧ ಅಂತ ಡಿಲ್ಲಿ ಯುಗಾದಿಯನ್ನು ಸಾರಿದರಲ್ಲಾ, ಆ ಪುಣ್ಯದ ದಿನದವರೆಗೆ!

ಆ ಹೊತ್ತು ಏನಾಯಿತು, ಅಂತೀರೇನು? ಯಥಾಪ್ರಕಾರ, ನಾನು 'ಡಿಕ್ಕಿ'ಯನ್ನೆಬ್ಬಿಸಿ, ನಾಲ್ಕು ಕಾಲಗಳ ಮೇಲೆ ನಿಲ್ಲಿಸಿ, ಪೃಷ್ಠಕ್ಕೊಂದು ಒದೆ ಕೊಟ್ಟು, ಹೊಸಲು ಚೆಗೆಳೆದು, ಗರಗರನೆ ಗೇಟಾಚೆ ನೂಗಿಸಿ, ಆಗಾಗ ಕಲ್ಲು ಹೊಡೆದು, ಲಾಲ್‌ಬಾಗ್ ತನಕ 'ವಾಕಿಂಗ್' ಕರೆದುಕೊಂಡು ಹೋಗಿದ್ದೆ. 'ಡಿಕ್ಕಿ'ಗೆ ನನ್ನ ಮೇಲೆ ತುಂಬಾ ಕೋಪ ದಾರಿ ಉದ್ದಕ್ಕೂ ನನ್ನ ಹತ್ತಿರ ಮಾತೇ ಇಲ್ಲ. ನಿಮಿಷ ನಿಮಿಷಕ್ಕೂ ಹಿಂದೆ ನೋಡುತ್ತಲೇ ಇದ್ದ. ಯಾವ ಮರದ ಬುಡವನ್ನೂ ತಂಪು ಮಾಡಲಿಲ್ಲ. ಬಾಲವನ್ನು ಬಿಗಿಯಾಗಿ ಕಾಲು ಸಂದಲ್ಲೇ ಅಂಟಿಸಿಕೊಂಡಿದ್ದ....

ಲಾಲ್‌ಬಾಗ್ ದೊಡ್ಡ ಗೇಟಿನ ಬಳಿ, ಎರಡು ಕಂತ್ರಿ ನಾಯಿಗಳು ಘೋರ ಸಮರವೊಂದರ ಪೀಠಿಕಾ ಪ್ರಕರಣವನ್ನು ಜರುಗಿಸುತ್ತಿದ್ದುವು. ಬೆನ್ನನ್ನು ಬಿಲ್ಲಿನಂತೆ ಬಾಗಿಸಿ, ಬಾಲ ಕುಣಿಸಿ, ಹಲ್ಲು ಕಾಣಿಸಿ, ಕುಣಿದು, ರೊಚ್ಚಿ ಮಾತುಗಳಲ್ಲೇ ಪರಸ್ಪರ ಬೈದಾಡುತ್ತಿದ್ದುವು. ಯಾವ ಗಳಿಗೆಯಲ್ಲಿ ಯಾರ ದಂತಪಂಕ್ತಿ ಯಾರ ಸೊಂಟಕ್ಕೆ ತಾಕಿ ರಕ್ತಪಾತವೋ ಎಂಬ ಭಯ, ಅಲ್ಲಿ ಇದ್ದ ಕಾವಲುಗಾರರಿಗೂ ಕೂಡ, ಉಂಟಾಯಿತು. ತಾತ ಮುತ್ತಾತಂದಿರೆಲ್ಲರನ್ನೂ ಆ ನಾಯಿಗಳು ಪರಸ್ಪರ

ಹೆಸರು ಹಿಡಿದು ದೂಷಿಸಿ, ಬೊಗಳಿ ಬೈಯ್ಯುತ್ತಿದ್ದುವು. ಕುಲಾಭಿಮಾನ ಕೆರಳಿ ಯಾವ ನಾಯಿ ಮೊದಲು ತಾಳ್ಮೆಯನ್ನು ಕಳೆದುಕೊಳ್ಳುವುದೋ ಎಂಬುದೇ ಎಲ್ಲರ ಕುತೂಹಲವನ್ನೂ ಕೇಂದ್ರೀಕರಿಸಿತ್ತು.

ಆಗ, 'ಡಿಕ್ಕಿ' ಒಂದು ಕೆಲಸಮಾಡಿತು. ಅದಕ್ಕೆ ಪರಿಸ್ಥಿತಿಯ ಅರಿವೇ ಉಂಟಾಗಲಿಲ್ಲ. ಮೆದುಳು ತುಂಬ ಮಣ್ಣು, ಅಂತ ಆಗಲೇ ಹೇಳಿರುವೆನಲ್ಲಾ.... ಏನೂ ತಿಳಿಯದ ಮಂಕ! ಆ ಜಗಳದ ರಣರಂಗದತ್ತ ಹೋಗುವುದೆಂದರೇನು? ಅವನಿಗೆ ಕಾಣಿಸಿದ್ದು, ಎರಡು ನಾಯಿಗಳು. ಅವು ಯಾವ ಮಹಾಸಮಸ್ಯಾ ಪೂರಣದ ಗಡಿಬಿಡಿಯಲ್ಲಿ ನಿರತರಾಗಿದಾರೆ ಎಂಬುದನ್ನು ಗಮನಿಸಬೇಡವೆ, ಪ್ರಾಣಿ? ನೆಟ್ಟಗೆ ಅವೆರಡರ ಕಡೆಗೆ ಪಾದ ಬೆಳೆಸಿತು 'ಡಿಕ್ಕಿ'.

ಆದರೆ, ಆಶ್ಚರ್ಯ! 'ಡಿಕ್ಕಿ'ಯನ್ನು ಕಾಣುತ್ತಲೇ, ನಾಯಿಗಳೆರಡೂ ವಾಯು ವೇಗ ಮನೋವೇಗದಿಂದ, ಲಾಲ್‌ಬಾಗಿನೊಳಕ್ಕೆ ಓಡಿ, ಆಚೆ ಗೇಟನಿಂದ ತಪ್ಪಿಸಿ ಕೊಂಡು, ಜಯನಗರದ ಬಡಾವಣೆ ಹಾದು,....ಆಶ್ಚರ್ಯವೇನೆಂದರೆ, 'ಡಿಕ್ಕಿ' ಅವು ಗಳ ಹಿಂದೆ ಓಡಲೇ ಇಲ್ಲ. ಅವನನ್ನು ನೋಡಿದ್ದೇ ತಡ, ಆ ಕಂತ್ರಿಗಳು ಅಷ್ಟು ಹೆದರಿಬಿಟ್ಟಿತ್ತು!

ಅಲ್ಲಿಂದಾಚೆಗೆ, ಏಕೆ, ಆ ದಿನವೆಲ್ಲ 'ಡಿಕ್ಕಿ'ಯ ತಲೆಯೊಳಗೆ ಎಂಥದ್ದೋ ಯೋಚನೆ! ವಿಚಾರಲಹರಿ! ಅದನ್ನ ಎತ್ತಿ ಹಿಡಿಯಲೂ ಆಗಲಿಲ್ಲ ಅವನಿಂದ.... ಅಷ್ಟು ಭಾರ .. ಏಕೆ ಹೀಗಾಯಿತು? ತನ್ನ ರೂಪು ಅಷ್ಟು ಭಯಂಕರವೆ? ತನ್ನಿಂದ ಇದು ಸಾಧ್ಯವೆ? ಅದುವರೆಗೂ ತಾನು ತನ್ನ ಜ್ಯೋತಿಯನ್ನು ಬೆಳಗಿಸದೆ ಮುಚ್ಚಿದ್ದೆನೆ? ಹೀಗೆ ಸತ್ವಹೀನನಾಗಿ, ಎಂಜಲು ನೆಕ್ಕುತ್ತ ಬಿದ್ದಿರುವುದು ತನ್ನ ಪ್ರತಿಷ್ಠೆಗೆ ಕುಂದಲ್ಲವೆ? – ಎಂದೆಲ್ಲ ಡಿಕ್ಕಿ ಯೋಚನೆ ಮಾಡಿರಬೇಕು, ಕುಂದು, ಅಂತ ನಿರ್ಧಾರ ಮಾಡಿರಬೇಕು....ಏಕೆಂದರೆ, ಅಂದಿನಿಂದ ನನ್ನ 'ಡಿಕ್ಕಿ'ಯ ಜೀವನಪಥವೇ ಬದಲಾಯಿತು. ಅದರ ಕಣ್ಣು ತೆರೆಯಿತು.

ಬುರುಡೆಯಲ್ಲಿ ಹೆಮ್ಮೆ, ಕಣ್ಣಲ್ಲಿ ಹೊಳಪು, ಕಿವಿಯಲ್ಲಿ ಚುರುಕು, ಎದೆಯಲ್ಲಿ ವಜ್ರ, ಕಾಲುಗಳಲ್ಲಿ ಮಿಂಚು, ಬಾಲದಲ್ಲಿ ಪ್ರೀತಿ—ಹೀಗೆ ಆ ದಿನ ತುಂಬಿ ತುಳುಕಾಡಿತು. ನನ್ನ ಬಾಗಿಲ ಬಳಿ ನಿಂತು, ಡಿಕ್ಕಿ ಶಾಪಗಳನ್ನು ಬೊಗುಳಿ ಅಭ್ಯಾಸ ಮಾಡಿಕೊಂಡ. ಮನೆಯ ಸುತ್ತ ಓಡಿ ಕಾಲುಗಳಿಗೆ ಪಾಠ ಕಲಿಸಿದ....ಗಾಳಿಗೆ ಎಲೆಗಳುದುರಿದಾಗ, ಅವನ್ನ ಅಟ್ಟಿಸಿ ಹಿಡಿದು ಕಚ್ಚಿ ಚೂರು ಚೂರುಮಾಡಿ ಹಲ್ಲುಗಳನ್ನು ಹರಿತಮಾಡಿಕೊಂಡ. ಲಾಲ್‌ಬಾಗ್ ಮುಂದಿನ ನಾಯಿಗಳ ಪ್ರಕರಣ ಡಿಕ್ಕಿಯ ಜೀವಿತದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡಬೇಕಾದ ಒಂದು ಮಹಾದಿನ!

"ನಾನು ಭಯಂಕರ ಸ್ವರೂಪಿ! ನನ್ನಿಂದಾಗದ ಕೆಲಸವಿಲ್ಲ! ನನ್ನನ್ನು ಕಂಡರೆ, ನಾಯಿಗಳು ಹೆದರುತ್ತವೆ", ಎಂಬ ಅರಿವು ಮೆದುಳನ್ನು ಪ್ರವೇಶ ಮಾಡುತ್ತಲೂ, 'ಡಿಕ್ಕಿ' ರಾಜ ಠೀವಿಯಿಂದ ನಮ್ಮ ಗೇಟನಾಚೆ ನುಸುಳಿ, ಎಂಟು ಮೂಲೆಗಳಿಗೂ

ತನ್ನ ಪುನರ್ಜನ್ಮದ ಸುದ್ದಿಯನ್ನು ಬೊಗುಳಿ ತಿಳಿಸಿದ. ಆಚೆ ಬೀದಿ, ಈಚೆ ಬೀದಿ, ಆಟದ ಬಯಲು, ಹೋಟೆಲಿನ ಎಂಜಲು ತೊಟ್ಟಿ ಎಲ್ಲ ಕಡೆಗೂ ನುಗ್ಗಿ, ಸುಮಾರು ಇಪ್ಪತ್ತು ಶುನಕ ಸಮರಗಳನ್ನಡಗಿಸಿ ಜಯಭೇರಿ ನುಡಿದ.

ಯಾವುದೋ ಪಾರ್ಟಿ ವೈಷಮ್ಯವನ್ನೇ ಬೆಳೆಸಿ, ನಾಯಕದ್ವಯರನ್ನಾರಿಸಿ ಕೊಂಡು, ಅವರ ಹಿಂದೆ ನಿಂತು, ಮಾರಾಮಾರಿಗೆ ಸಿದ್ಧವಾಗುತ್ತ ಇದ್ದ ಶ್ವಾನಗಳ ತಂಡವನ್ನು ಕಂಡಕೂಡಲೆ, ಡಿಕ್ಕಿ, "ಲ್ರೋ! ಇನ್ನು ಇಂಥದ್ದು ಈ ಪ್ರಾಂತದಲ್ಲಿ ಸಾಧ್ಯವಿಲ್ಲ" ಎನ್ನುತ್ತ, ಆ ಗುಂಪುಗಳ ಮಧ್ಯೆ ನುಗ್ಗಿ, ಸೀಸ್ ಫೈರ್‌ನ್ನು ನೆಲೆಗೊಳಿಸುತ್ತಿದ್ದನು.

ಅಲ್ಲಿಂದಾಚೆ, ನಮ್ಮ ಎಕ್ಸ್‌ಟೆನ್ಶನ್ನಲ್ಲಿ ಜನ ರಾತ್ರಿಹೊತ್ತು ನೆಮ್ಮದಿಯಾಗಿ ನಿದ್ದೆ ಮಾಡಿದರು. ನಾಯಿಗಳ ಕಚ್ಚಾಟ ನಿಂತಿತು. ತಮ್ಮ ದ್ವೇಷಾಸೂಯೆ ಗಳನ್ನು ಪ್ರಕಟಿಸಲು ಅದುವರೆಗೂ ಕಾದಾಟವೊಂದೇ ಮಾರ್ಗವಾಗಿತ್ತು, ನನ್ನ ಕೇರಿ ನಾಯಿಗಳಿಗೆ. ಆದರೆ, ಡಿಕ್ಕಿಗೆ ಸ್ವಸ್ವರೂಪ ಜ್ಞಾನೋದಯವಾದಲಾಗಾಯ್ತು, ಎದುರು ಪಕ್ಷದ ನಾಯನ್ನು ಕಂಡಾಗ, ಗಂಟಲೊಳಗೇನೇ ಗುರ್ರೆಂದು ಶಪಿಸಿ, ಈ ಪಕ್ಕದ ಗೋಡೆ ಅಂಚನ್ನನುಸರಿಸಿ ಅತ್ತಕಡೆ ದೃಷ್ಟಿ ಬೀರದೆ ಹೋಗುವುದೊಂದೇ ಸೇಡು ತೀರಿಸುವ ಉಪಾಯ, ಅವಕ್ಕೆ! ನನ್ನ ಮನೆ ಮುಂದೆ ಹಾದುಹೋಗಬೇಕಾಗಿ ಬಂದಾಗ ಕೂಡ, ನಾಯಿಗಳು ಒಂಟಿಯಾಗಿ ಹೋಗಲು ಹಿಂಜರಿದುವು. ಆಚೆ ತುದಿ ಲೈಟ್‌ಕಂಬದ ಕೆಳಗೆ, ಎಂಟು ಹತ್ತು ನಾಯಿಗಳು ಸೇರುವವರೆಗೂ ಕಾದಿದ್ದು, ಒಂದಕ್ಕೊಂದು ಅಂಟಿಕೊಂಡೇ ಧೌಡಾಯಿಸುತ್ತಿದ್ದುವು.... ಡಿಕ್ಕಿ ಎಂದರೆ, ಅಷ್ಟು ಭಯ.

ಆದರೆ, ನನ್ನ ಕೇರಿನಾಯಿಗಳು ಬಾಲ ಮುದುರಿಕೊಂಡರೂ, ಬೆಂಗಳೂರಿನ ಇತರೇ ಕೇರಿನಾಯಿಗಳು ಸುಮ್ಮನಿರಬೇಕಲ್ಲಾ! ಡಿಕ್ಕಿಯ ಸಾಹಸ ಭೀಮತ್ವದಸುದ್ದಿ ಕಾರ್ಪೊರೇಷನ್ ಆವರಣ ಶುನಕ ಸಮೂಹವನ್ನೇ ಕೆರಳಿಸಿದುವು. ಅವುಗಳು ಆಗಾಗ್ಗೆ ಬಂದು ನಮ್ಮ ಕೇರಿ ನಾಯಿಗಳನ್ನು ಮೂದಲಿಸಿದುವು. ಅಲ್ಲಲ್ಲಿ ಮೀಟಿಂಗ್ ಸೇರಿ, ಡಿಕ್ಕಿಯನ್ನು ಸಿಕ್ಕಾಬಟ್ಟೆ ಬೈದುವು. ಅವನಿಗೆ ಹೆದರಿ ಹೇಡಿಗಳಾಗಿರುವ ನನ್ನ ಕೇರಿ ನಾಯಿಗಳನ್ನು ಕುರಿಗಳೆಂದೇ ದೂರಿದರು. ಕೊನೆಗೆ, ಅವು ಕಂಟೋನ್‌ಮೆಂಟ್ ಕಡೆಯಿಂದ ನಾಲ್ಕು ಭಾರಿ ನಾಯಿಗಳನ್ನು ಬೇಕೆಂದೇ ಮೊನ್ನೆ ನನ್ನ ಗೇಟಿನಾಚೆ ತಂದು ನಿಲ್ಲಿಸಿ ಬೊಗುಳಿಸಿ, ಡಿಕ್ಕಿಯನ್ನು ದೃಷ್ಟಿಯುದ್ಧ, ವಾಗ್‌ವೃಷ್ಟಿಯುದ್ಧ ದಂತ ಯುದ್ಧಗಳಿಗೆ ಕರೆದುವು.

ಅವರ ಪಿತೂರಿಯನ್ನರಿಯ— ಡಿಕ್ಕಿ! ಕಂಟೋನ್‌ಮೆಂಟಿನ ಮಾಂಸಾಹಾರಿ ಶ್ವಾನವೀರರ ಭುಜಬಲವನ್ನೂ ಅರಿಯ .. ....

ಯಾವುದೋ ಕಂತ್ರಿನಾಯಿಗಳ ಕದನ — ಎಂದು ಊಹಿಸಿ, ಹೊರಕ್ಕೆ ಹೋದವನು,

ಹತ್ತು ನಿಮಿಷಗಳನಂತರ, ಗೋಳಾಡುತ್ತ ಹೆದರಿ ನಡುಗುತ್ತ ಒಳಕ್ಕೆ ನುಗ್ಗಿ ತಾತನ ಮಂಚದ ಕೆಳಕ್ಕೆ ತೂರಿ, ಬೆನ್ನಮೇಲಿನ ಗಾಯಗಳನ್ನು ನೆಕ್ಕುತ್ತಿದ್ದ. ಕಲಿತನ್ ಪಾಠಮನ್, ಇನ್ನು ಮರೆಯನ್ !

ಆಯಿತವನ ಸಾಹಸ ಜೀವನ !..... .. ಇಬ್ಬರ ಜಗಳದಲ್ಲಿ ಮೂರನೆಯವನಿಗೆ ಪೆಟ್ಟು, ಎನ್ನುವುದೇ ಡಿಕ್ಕಿಯ ಅನುಭವ. — ನಾ. ಕ.



ಜಾರಿಂಗ್ ಬಂದು ಜಾರಿ ಕೊಂಡು ಬಿಟ್ಟನೇ !!

ನಿಲ್ಲಿಸು!

(ಹಾಸ್ಟಲಲ್ಲಿ ಹಗಲಿರುಳೂ ಪಿಟೀಲು ಹಿಡಿದು ಪೀಡಿಸುವ ಪುಣ್ಯಾತ್ಮನನ್ನುದ್ದೇಶಿಸಿ)

ಎಲ್ಲ ಮಲಗಿಕೊಳ್ಳ್ವ ಮುನ್ನ
ನಿನ್ನೆ ಮಲಗಿ ನಿದ್ದೆಗೈದೆ
ಎಲ್ಲರೇಳ್ವ ಮುನ್ನ ಎದ್ದು
ಹೀಗೆ ಪಿಟಿಲು ಹಿಡಿದುಕುಳಿತೆ
ನಾಷ್ಟ ಮುಗಿಸಿ ಬಂದಮೇಲೂ
ಕುಯ್ಯುತಿರುವೆ ನೀಂ!

ಟೆಸ್ಟು ಭೀತಿ ಕೊರೆವುದಿಲ್ಲ
ಅಂಕೆಯಿಲ್ಲ ಶಂಕೆಯಿಲ್ಲ
ಮಾವ M O. ಕಳಿಸುತಿರಲು
ಹಣದ ಚಿಂತೆ ಮೊದಲೆ ಇಲ್ಲ
ಬೆಳಗಿನ ದೂ ನಿದ್ದೆ ಕೆಡಿಸಿ
ಕುಯ್ಯುತಿರುವೆ ನೀಂ!

ಕ್ಲಾಸಿಗೆಲ್ಲ ಚಕ್ಕರಿಟ್ಟು
ಬೇಗ ರೂಮು ಸೇರಿ ನೀನು
ಹಸೆಯ ಬಿಡಿಸಿ ಗೊರಕೆ ಹೊಡೆದು
ನಿದ್ದೆ ಮುಗಿಸಿ ಕೂರುವೆ—
ರಾತ್ರಿ ಮತ್ತೆ ಪಿಟಿಲನೆತ್ತಿ
ಕುಯ್ಯಲಿರುವೆ ನೀಂ!

ನಿನ್ನ ರೋಗ ನಿನಗೆ ಇರಲಿ
ನಮಗದೇಕೆ ವ್ಯಥೆಯ ಕೊಡುತಿ?
ಯೆಹುದಿ ಮೆನುಹಿನ್ ಕಂಡಮೇಲೆ
ದಿನದಿನವೂ ನಿನ್ನ ಗೋಳು
ರಾತ್ರಿ ಹಗಲು ಪಿಟಿಲು ಹಿಡಿದು
ಕುಯ್ಯುತಿರುವೆ ನೀಂ!

ರಾಗ ರೋಗ ಸವಿದು ಸವಿದು
ಕಿವಿಯು ಕಿವುಡು ಮನವು ಮುರುಕು
ಓದಲಿಲ್ಲ ಬರೆಯಲಿಲ್ಲ

ನಮಗೆ ವಿಶ್ರಾಂತಿಯಿಲ್ಲ—
ಹೆರರ ಗೊಡವೆ ನಿನಗದುಂಟೆ?
ಕುಯ್ಯುತಿರುವೆ ನೀಂ!

ಗೆಳೆಯರಿವರ ಮೂತಿ ನೋಡು
ಹೇಗೆ ಹುಳಿತು ಹಿಂಡುತಿಹುದು
'ಕೊಂಯ್ಯ ಕೊಂಯ್ಯ' ಕೇಳಿ ಕೇಳಿ
ಬರಿದೆ ಗೋಳು ಸುರಿಸುತಿಹುದು
ಮರುಕವಿಲ್ಲದೇಕೆ ಇಂತು
ಕುಯ್ಯುತಿರುವೆ ನೀಂ?

ಕರುಣೆಯಿನಿಸು ಬಾರದೇನು
ಯಮಯಾತನೆ ಕಂಡರೂನು
ಗಾಜುಕಣ್ಣು ನಿನ್ನದೇನು?
ನಿನ್ನ ಎದೆಯು ಬಂಡೆಯೇನು?
ಅಪಸ್ವರದ ಮೇಳವನ್ನು
ಕುಯ್ಯುತಿರುವೆ ನೀಂ!

ಕೊಂಯ ಕೊಂಯ ಕುಯ್ಯುತಿರಲು
ಬೆಕ್ಕು ನಾಯಿ ನಾಚಿ ಓಡಿ
ಬಾಲ ಮಡಿಸಿ ಮೌನವಾಂತು
ತೆಪ್ಪಗಿಹುದ ಕಂಡಮೇಲು
ಮತ್ತೆ ಅಗೊ 'ಕುಂ....ಯೋ' ಎಂದು
ಕುಯ್ಯುತಿರುವೆ ನೀಂ!

ಗೆಳೆಯ ನೀನು ಕಾಡು ಸೇರು
ವರ್ಷ ಹತ್ತು ಕುಯ್ಯುತಿರು
ಪೂರ್ತಿ ಕಲಿತು ಊರ ಸೇರು
ಈಗ ಕೊಂಚ ಸುಮ್ಮನಿರು
ಕಲಿತ ಕಾಲ ಘೋರ! ಘೋರ!
ನಿಲ್ಲಿಸು ನಿಲ್ಲಿಸು
ತಾಳಲಾರೆವೆಮ್ಮನುಳಿಸು
ಪಿಟೀಲ ನಿಲ್ಲಿಸು!

(ವಿ. ಸೀ.ಯವರಿಗೆ ನಮೋ ಎಂದು)

— ರಾಮಿ.

ಸುದ್ದಿಗಳಲ್ಲದ ಸುದ್ದಿಗಳು

ಒಂದು ನಾಯಿ ಒಬ್ಬಮನುಷ್ಯನನ್ನು ಕಡಿದರೆ ಅದೊಂದು ಸುದ್ದಿಯಲ್ಲ; ಸುದ್ದಿಯೆನಿಸಬೇಕಾದರೆ ಒಬ್ಬ ಆಸಾಮಿ ನಾಯಿಯನ್ನೇ ಕಡಿದಿರಬೇಕು—ಎಂಬುದಾಗಿ ಒಬ್ಬಾತ ಸುದ್ದಿಯ ಸೂತ್ರವನ್ನು ಕೊಟ್ಟಿದ್ದಾನೆ. ಆದರೆ ಪೇಪರಿನವರು ಬರಬರುತ್ತಾ ನಾಯಿ ಮನುಷ್ಯನನ್ನು ಕಡಿದಂಥ ಸಮಾಚಾರಗಳನ್ನೇ ತಲೆಹಾಕಿ ಪುಟ ತುಂಬಿಸುತ್ತಾರಲ್ಲ! ನೋಡಿ—ಇವೆಲ್ಲಾ ನಿಜವಾದ ಸುದ್ದಿಗಳೆ?—

"ಆಲ್ಜೀರಿಯಾದಲ್ಲಿ ಕಳೆದ 24 ತಾಸುಗಳಲ್ಲಿ 150 ಮಂದಿ ಬಂಡುಗಾರರು ಮಡಿದರು".

"ನೆಹರೂರವರು ಬಂದಿಳಿದಾಗ ಘಟ್ಟಿಯವರು ಕರೀ ಬಾವುಟ ಬೀಸಿದರು."

"ಕೃಷ್ಣ ಮೆನೋನರು ವಿಮಾನದಲ್ಲಿ ಹಾರಿದರು."

"ಅಲ್ಲಾಮ ಮಶ್ರಾಕಿ ಒಂದು ಮಿಲಿಯ ಸ್ವಯಂಸೇವಕರೊಡನೆ ಕಾಶ್ಮೀರಕ್ಕೆ ನುಗ್ಗುತ್ತೇನೆಂದರು."

"೧೦೮ ಶ್ರೀ ಶ್ರೀ ಶ್ರೀಗಳವರು ಪಾದಪೂಜೆ ಮಾಡಿಸಿಕೊಂಡರು."

"ವಿದೇಶದಿಂದ ಬಂದ ನಿಯೋಗದವರು ಮಹಾತ್ಮರ ಸಮಾಧಿಯ ಮೇಲೆ ಪುಷ್ಪಗುಚ್ಛವನ್ನಿಟ್ಟರು."

"ದಕ್ಷಿಣ ಆಫ್ರಿಕದಲ್ಲಿ ಇನ್ನೊಂದು ಅಶ್ವೇತನಿಗ್ರಹ ಮಸೂದೆ ಬಂತು."

"ಆಗಾಖಾನರು ಇನ್ನೊಮ್ಮೆ ತೂಕಮಾಡಿಸಿಕೊಂಡರು."

"ವಿದ್ಯಾಸಂಸ್ಥೆಯಲ್ಲಿ ಮಾತನಾಡುತ್ತಾ ಭಾಷಣಕಾರರು ಇಂದಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ದೋಷವಿದೆ; ಬದಲಾವಣೆಗಳಾಗಬೇಕು—ಎಂದರು."

"ಸಾಗರದಾಟಿ ಸಂಸ್ಕೃತಿ ನಿಯೋಗದವರು ನಿಮ್ಮ ಸಂಸ್ಕೃತಿ ದೊಡ್ಡದು ಎಂದರು."

"ದಕ್ಷಿಣ ಅಮೇರಿಕದ ರಾಷ್ಟ್ರದಲ್ಲಿ ಸರ್ವಾಧಿಕಾರಿ ಪತನಗೊಂಡನು."

"ದೊಡ್ಡ ಮನುಷ್ಯರೊಬ್ಬರು ಹೃದಯಕ್ರಿಯೆ ನಿಂತು ಸತ್ತರು....ಅವರು ದಾನಿಗಳೂ ಧರ್ಮಿಷ್ಠರೂ ಆಗಿದ್ದರು."

"ಬ್ರಿಟನ್ನಿನ ಕನ್ಸರ್ವೇಟಿವ್ ಪತ್ರಿಕೆ ನೆಹರೂರನ್ನು ಬೈದಿದೆ."

"ವಿದೇಶದಿಂದ ಬಂದ V. I. P. ಗಳು 'ನೀವು ಅಸಾಧ್ಯ ಪ್ರಗತಿ ಸಾಧಿಸಿದ್ದೀರಿ' ಎಂದರು."

"ದೊಡ್ಡ ರಾಷ್ಟ್ರವೊಂದು ಅಣುಶಕ್ತಿ ಪ್ರಯೋಗ ನಡೆಸಿತು."

"ವಿದೇಶದ ಪ್ರಧಾನಿಗಳು 'ನಮ್ಮೆರಡು ರಾಷ್ಟ್ರಗಳಿಗೂ 10000 ವರ್ಷಗಳಿಂದ ಗಂಟು—ನಾವಿಬ್ಬರೂ ಶಾಂತಿಪ್ರಿಯರು' ಎಂದರು."

"ರೈಲಿನವರು, ಪೋಸ್ಟಿನವರು ಒಂದನೇ ತಾರೀಖು ಸಂಬಳ ತೆಗೆದುಕೊಳ್ಳಲಿಲ್ಲ; ಎರಡನೇ ತಾರೀಖು ತೆಗೆದುಕೊಂಡರು."

ಆಹಾಹಾ! ಇವೆಲ್ಲಾ ಏನು ಮಹಾ ಸುದ್ದಿಗಳೊ!

— ರಾಮಿ.



ಡಾಕ್ಟರೇ? ನನ್ನ ದಕ್ಷಿಣೇಲಿ ನಿಮಗೆ ಶತಾಂಶ ೩೦ ಕೊಡ್ತೀನಿ!!

ಮಧ್ಯಂತರ ಕವಿಜೀವನ ವಿಚಾರ

(ಇ. ಕೃ. ಪ್ಲೆಪ್ರೇ., ಯುಗ)

ಹದಿನೆಂಟನೆಯ ಶತಮಾನದ ಆರಂಭ ಭಾಗವನ್ನು, ಕನ್ನಡ ಸ ಹಿತ್ಯ ಚರಿತ್ರಕಾರರು ಕುಮಾರವ್ಯಾಸ ಯುಗದಲ್ಲಿ ಸೇರಿಸಿದ್ದಾರೆ. ಮುದ್ದಣ್ಣನನ್ನೂ ಅದೇ ಯುಗದ ಕವಿಗಳಲ್ಲಿ ಒಬ್ಬನೆಂದು ಹೇಳಿದ್ದಾರೆ. ಥೋಡಾ ಹೈ ಮೈದಾನ್ ಹೈ ಔರ್ ತಂಗಟೇ ಜರಲೂ ಭೀ ಹೈ.

ಈ ಕಾಲದ ಕವಿಗಳ ಜೀವನದಲ್ಲಿ (ಇನ್ನುಳಿದ ಕನ್ನಡ ಕವಿಗಳ ಜೀವನದಲ್ಲಿದ್ದ ಹಾಗೇ) ಇನ್ಸೋಮ್ನಿಯಾ, ಕೃತಿಚೌರ್ಯ ಮತ್ತು ಪ್ಲೆಟಾನಿಕ್ ಪ್ರೇಮಗಳು ಹಾಸು ಹೊಕ್ಕಾಗಿರುವುದರಿಂದ ಇದನ್ನು ಅಂದರೆ ಈ ಕಾಲ ವಿಭಾಗವನ್ನು ಇಕೃಪ್ಲೆಪ್ರೇಯುಗ ವೆಂದು ನಾವು ಕರೆಯುತ್ತಿದೇವೆ.

ವಿಚಾರಂ

ಈಗ ಕನ್ನಡದಲ್ಲಿ ಉಪಲಬ್ಧವಾಗಿರುವ ಗ್ರಂಥಗಳಲ್ಲಿ ಮೊದಲನೆಯದೆಂದು ನಾವು ಭ್ರಮಿಸಿರುವ ಕವಿ ರಾಜಮಾರ್ಗವು ದಂಡಿಯ ಕಾವ್ಯಾದರ್ಶದಿಂದ ಶ್ರೀ ವಿಜಯನು ಕತ್ತರಿಸಿದ ಚೋರಕೃತಿ. ಅದನ್ನು ನೃಪತುಂಗನು ಲಪಟಾಯಿಸಿ, ಈ ಗ್ರಂಥ ನನ್ನದೇ ಎಂದನು. ಪಂಪನ ರನ್ನನ, ನಾಗವರ್ಮನ, ಜನ್ನನ, ಹಾಗೂ ಉಳಿದೆಲ್ಲ ಕವಿಗಳ ಗ್ರಂಥಗಳೂ ಸಂಸ್ಕೃತ ಮೂಲದಿಂದ ಕದ್ದುವು ಇಲ್ಲವೇ ಪರಸ್ಪರವಾಗಿ ಕದ್ದವು. ಹಾಗೆಯೇ,ಶರಣರ ವಚನಗಳು (ಮೂಲ–ಉಪನಿಷತ್ತು,ಹಾಗೂ ಜಾನಪದ ಸಾಹಿತ್ಯ) ಹರಿಹರನ ಗಿರಿಜಾಕಲ್ಯಾಣ (ಮೂಲ—ಸಂಸ್ಕೃತ) ಹಾಗೆಯೇ ರಾಮಾಶ್ವಮೇಧ (ಮೂಲ-ಶೇಷ ಪುರಾಣ) ಹಾಗೆಯೇ ರಾಮಾಯಣ ದರ್ಶನ (ಮೂಲ- ವಾಲ್ಮೀಕಿ). ಹೀಗೆಯೇ ಕನ್ನಡದ ಸಮಸ್ತಕೃತಿಗಳೂ ಚೋರ್‌ಬಜಾರಿನ ಮಾಲುಗಳು. ಅಪ್ಪಿತಪ್ಪಿ ಸ್ವತಂತ್ರ ಕೃತಿಗಳಿದ್ದರೆ ಅತಿ ನೀರಸ. ಹಾಗೆಯೇ ಕನ್ನಡದಲ್ಲಿರುವ ವಿಮರ್ಶಾಗ್ರಂಥಗಳು, ಲಕ್ಷಣ ಗ್ರಂಥಗಳು, ಅವಲಕ್ಷಣ ಗ್ರಂಥಗಳು ಎಲ್ಲವೂ ಕೃತಿಚೌರ್ಯಗಳು.

ಇನ್ಸೋಮ್ನಿಯಾ, ಕೃತಿಚೋರನ ಸಹಜ ಬಂಧು. ನೃಪತುಂಗನು ಕವಿರಾಜ ಮಾರ್ಗವನ್ನು ಕದ್ದಾಗಲೂ, ಕೃಷ್ಣದೇವರಾಜನು ಆಮುಕ್ತ ಮಾಲ್ಯದವನ್ನು ಕದ್ದಾಗಲೂ ನಿದ್ರಾಹೀನರಾಗಿಯೇ ಇದ್ದರು.

ಪ್ಲೆಟಾನಿಕ್ ಪ್ರೇಮವಂತೂ ಧಂಡಿಯಾಗಿದೆ. ಗುಣವರ್ಮ-ಕಿರಾತೆ, ಪಂಪ-ನೀಲಾಂಬರೆ, ಚಾವುಂಡರಾಯ ಮತ್ತು ನಾಗವರ್ಮ-ಗಾವಿಲ ಸ್ತ್ರೀಯರು; ಇವು ಕವಿಗಳ ಪ್ಲೆಟಾನಿಕ್ ಪ್ರೇಮದ ಲಕ್ಷ್ಯಗಳು. ಕನ್ನಡದ ಪ್ರಥಮ ಕವಯಿತ್ರಿ ವಿಜಯೆಯ ಪ್ರೇಮ ಪ್ರಸಂಗವನ್ನು (ಮತ್ತು ಅವಳ ಕಾವ್ಯವು ಯಾವುದೆಂಬುದನ್ನು) ನಾವು ಅರಿಯೆವು. ಕಂತಿಯಾದರೋ, ಕಂತಿ-ಹಂಪರ ಸಮಸ್ಯೆಗೆ ಕಾರಣಳಾದಳು. ಅಕ್ಕಮಹಾದೇವಿ ಹಾಗೂ ಚೆನ್ನಮಲ್ಲಿಕಾರ್ಜುನ ಇವರ ಪ್ಲೆಟಾನಿಕ್ ಪ್ರೇಮ ಲೋಕ ವಿದಿತವೇ ಆಗಿದೆ.

ಇಂತಹ ಅದ್ಭುತ, ಅಭೂತಪೂರ್ವ ಪರಂಪರೆಗಳ ಸಂಪ್ರದಾಯಗಳ ಭದ ವಾದ ಅಡಿಗಲ್ಲಿನಮೇಲೆ ಇಕ್ಕೃಪ್ಲೆಪ್ರೇಯುಗದ ಸುಂದರವಾದ ಹಂದರ ಹಬ್ಬಿ ಹಸುರಾಯ್ತು.

ಅಪ್ರತಿಮವೀರ, ಬಿರುದೆಂತೆಂಬರಗಂಡ, ನವಕೋಟಿ ನಾರಾಯಣ ಶ್ರೀ ಶ್ರೀ ಚಿಕ್ಕದೇವರಾಜ ಒಡೆಯರು ಉತ್ತರ ದೇಶದಲ್ಲಿ ಉದ್ವೃತ್ತ ಚರಿತ್ರರೆನಿಸಿ, ಶಂಭೋಜಿಯಂ ಭಯಾರ್ಣವದೊಳ್ ಮುಳುಂಗಿಸಿ, ಕೊಂಗರನ್ನೂ ತಿಗುಳರನ್ನೂ ಬಡಿದು (ಸಾಲೊಮನ್ ಬಂಡಾರನಾಯಕೆಯವರು ಸ್ವಲ್ಪ ಗಮನಕೊಟ್ಟು ಇದರಿಂದ ಪಾಠ ಕಲಿಯಲಿ) ರಾಜಧಾನಿಗೆ ಬಂದು ಸುಖವಸ್ತಿ ಮಾಡಲಾರಂಭಿಸಿದರು ಆಗ ಮಾಗಿಯ ಕಾಲ, ಆಕಾಶದ ತುಂಬಾ ತರಗೆಲೆಗಳು. ರಾಜಧಾನಿಯಲ್ಲೇ ಠಿಕಾಣಿ ಹಾಕಿದನಂತರ ಅವರು ಸಾಹಿತ್ಯ ರಚನೆಗೆ ಮನಸ್ಸು ಕೊಟ್ಟರು. ಆಸ್ಥಾನದ ತುಂಬಾ ತಾಳೆಯೋಲೆಗಳು ಹಾರಲಾರಂಭಿಸಿದವು. ಪ್ರಭುವರ್ಯರು ತಾವೇ ಸ್ವತಃ ಕಾವ್ಯರಚನೆ ಮಾಡುತ್ತಿರುವರೆಂಬ ವದಂತಿ ಹಬ್ಬಿತು. ಅವರ ಪ್ರಧಾನಿ ತಿರುಮಲಾರ್ಯರು (ಮಧುರೆಯ ಮಂಗಮ್ಮನವರ ಮಾಜೀಮಂತ್ರಿ) ಯಥಾರಾಜಾ ಎಂದುಕೊಂಡು ಕಾವ್ಯರಚನೆಗೆ ಕೈಯಿಟ್ಟರು. ಅವರ ತಮ್ಮ ಸಿಂಗರಾರ್ಯ ನಾನೇನು ಕಡಿಮೆ ಎಂದ. ಬರೆಯಲಾರಂಭಿಸಿದ ಚಿಕ್ಕುಪಾಧ್ಯಾಯ ಹತ್ತಿರ ಕೂಡ ಹನ್ನೊಂದು ಎಂದು ಗೀಚಲಾರಂಭಿಸಿದ. ಇದೇ ಸಮಯ, ಪಠಿಶೀ ಕೂತ ಗೋವಿಂದಾ!... ಮದುವೇಲಿ ಉಂಡವಳೇ ಜಾಣೆ ಎಂದು ಹೊನ್ನಮ್ಮ ಶೃಂಗಾರಮ್ಮ ಹಾಗೂ ಉಳಿದ ಅಸಂಖ್ಯಾತರು ತಾವೂ ಕಾವ್ಯರಚನೆ ಮಾಡುತ್ತಿರುವುದಾಗಿ ಸಾರಿದರು. ಅರಮನೆಯ ಊಳಿಗದವರೂ, ದಂಡಿನ ಸೈನಿಕರೂ, ಗರುಡಿಯ ಹೈಕಳೂ, ಅಕ್ಕರವನರಿಯದೊಕ್ಕಲಿಗರೂ, ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ತಾಳೆಮರಗಳ ಕೆಳಗೆ ಹಿಂಡು ಹಿಂಡಾಗಿ ನಿಂತರು (ತಾಳೆ ಮರಗಳು ಸಿಕ್ಕದಿದ್ದ. ಕೆಲವರು ಈಚಲಮರಗಳ ಕೆಳಕ್ಕೆ ಹೋದರೆಂದೂ, ಆದರೂ ಅವರು ಕುಡಿದುದು ಮಜ್ಜಿಗೆಯೇ ಎಂದೂ ವದಂತಿ)

ಇಷ್ಟರಲ್ಲಿ ಪಕ್ಕಾ ಗ್ರಂಥರಚನೆ ಮಾಡಿದವರು ಮೂವರೇ. 1) ಚಿಕ್ಕುಪಾಧ್ಯಾಯ —ಮೂವತ್ತಕ್ಕೂ ಹೆಚ್ಚಿನ ಗ್ರಂಥಗಳು. ಇವೆಲ್ಲಾ ಸ್ಥಳಮಹಾತ್ಮೆಗಳನ್ನು ಹೇಳುವ

ಪುಸ್ತಕಗಳಾದುದರಿಂದ ವಸ್ತುಚೋರೀ ಮಾಲು. ಅದೇ ಕಾರಣದಿಂದಲೇ ಇವುಗಳನ್ನು ಗ್ರಂಥಗಳೆಂದು ಪರಿಗಣಿಸಬಹುದೇ ಎಂಬ ಪ್ರಶ್ನೆ ಏಳುತ್ತದೆ.

2) ತಿರುಮಲಾರ್ಯ— ಹಾಳೂರಿನಲ್ಲಿ ಉಳಿದ ಗೌಡ. ಗ್ರಂಥಗಳು ಚಿಕ್ಕದೇವ ರಾಜ ಬಿನ್ನಪ, ಗೀತಗೋಪಾಲ, ಮಿತ್ರವಿಂದಾ ಗೋವಿಂದ, ಅಪ್ರತಿಮವೀರಚರಿತ ಇತ್ಯಾದಿ.

3) ಸಿಂಗರಾರ್ಯ— ಹದಿಬದೆಯ ಧರ್ಮ, ಪದ್ಮಿನೀ ಕಲ್ಯಾಣ.

ಈ ಗ್ರಂಥಗಳಲ್ಲಿನ ವಸ್ತು ಯಾರಿಂದ ಹೇಗೆ ಕದ್ದುದು ಎಂಬುದನ್ನು ಊಹಿಸಲೂ ಅಸಾಧ್ಯ. ಬರೆಯುವರು ಮೂವರೇ ಇದ್ದಾಗ ಊರಿನಲ್ಲಿ ಎಲ್ಲರೂ 'ಕವಿಗಳು ನಾವು' ಎಂದು ಹೇಳಿಕೊಂಡು ಮಾಡುವ ಕೆಲಸ ಬಿಟ್ಟು ಮಾವವಿಗೆ ಶರಣು ಮಾಡಲಾರಂಭಿಸಿ ದುದನ್ನು ಸಹಿಸಲು ತಿರುಮಲಾರ್ಯರಿಗೆ ಸಾಧ್ಯವಾಗಲಿಲ್ಲ ಆಗ ಅವರು ಸಾಹಿತ್ಯವನ್ನು ರಾಷ್ಟ್ರೀಕರಿಸುವ ಯೋಚನೆ ಮಾಡಿದರು. **ಶ್ರೀ ಚಿಕ್ಕದೇವರಾಜ ಪಬ್ಲಿಕೇಷನ್ಸ್ ಇನ್ಕಾರ್ಪೋರೇಟೆಡ್** ಎಂಬ ಸರ್ಕಾರೀ ಸಂಸ್ಥೆಯನ್ನು ಕೂಡಲೇ ಸ್ಥಾಪಿಸಿ, ಹೇಮಂತ ಸಾಹಿತ್ಯೋತ್ಸವಕ್ಕೆ ಏರ್ಪಾಟುಮಾಡಿದರು. ಸಾಹಿತ್ಯೋತ್ಸವದಲ್ಲಿ ಕೊನೆಯಪಕ್ಷ ಒಂದಾದರೂ ಗ್ರಂಥವನ್ನು ಪ್ರಕಟಿಸಿದವರಿಗೆ ಮಾತ್ರ ಲೇಖನ ಸ್ವಾತಂತ್ರ್ಯವನ್ನೂ, ಲೇಖಕ ಎಂಬ ಪರ್ಮಿಟ್ ಯಾನೇ ಸರ್ಟಿಫಿಕೇಟನ್ನೂ ಕೊಡಲಾಗುವುದು ಎಂದು ಸಾರಿದರು ಈ ಆರ್ಡಿನೆನ್ಸ್ ಹೊರಟ ಮರುದಿನವೇ ಸಾಹಿತ್ಯೋತ್ಸವ ನಡೆಯಬೇಕೆಂದು ರಾಜಾಜ್ಞೆಯಾಯಿತು.

ಈ ಆಜ್ಞೆ ಹೊರಟ ದಿನ ಪ್ರಭುಗಳು ಯೋಚನಾಮಗ್ನರಾದರು. ಏಕೆಂದರೆ ನಿಜಕ್ಕೂ ಅವರು ಏನನ್ನೂ ಬರೆದಿರಲಿಲ್ಲ. ಸಿಂಗರಾರ್ಯನಿಗೆ ಆ ಚಿಂತೆಯಿರಲಿಲ್ಲ

ಮನಃಶ್ಶಾಂತಿ ಪಡೆಯಲೆಂದು ಅಂತಃಪುರಕ್ಕೆ ಹೋಗಿ ಕುಳಿತು 'ಓಲಗಗೊಟ್ಟು ಅಲ್ಲಿದ್ದ ಸುಶೀಲೆಯಮೇಲೆ ಸಾಲುವಿಡಿದು ಕಡೆಗಣ್ಣ ಸುಳಿಸುತ್ತಿದ್ದಾಗ, ಅಲ್ಲಿದ್ದ ಹೊನ್ನಮ್ಮನಮೇಲೆ ಅಪ್ರತಿಮವೀರರ ಕೃಪಾವಲೋಕನವುಂಟಾಯಿತು ಇವಳೂ ಕೂಡ ನಾಳೆ ಕವಿಸಮ್ಮೇಳನಕ್ಕೆಬಂದರೆ ಚೆನ್ನಲ್ಲವೇ ಎಂದುಕೊಂಡು 'ಯಾವುದಾದರೂ ಕಾವ್ಯ ಬರೆದಿರುವೆಯಾ' ಎಂದರು. ಹೊನ್ನಮ್ಮ 'ಜೀಹಾಂ!' ಎಂದೇಬಿಟ್ಟಳು ಹದಿಬದೆಯ ಧರ್ಮವನ್ನೋದಲಾರಂಭಿಸಿದಳು. ಪಕ್ಕದಲ್ಲಿದ್ದ ಸಿಂಗರಾರ್ಯ ಮೂರ್ಛೆಗೆ ಸಂದರು ಹೊನ್ನಮ್ಮ ತನ್ನ ಗ್ರಂಥವನ್ನು ಕದ್ದುದು ಯಾವಾಗ ಎಂದು ಚಿಂತಿಸುತ್ತಾ ಅವರೆಚ್ಚತ್ತರು. (ಆರ್ಡಿನೆನ್ಸ್ ಹೊರಟುದನ್ನು ಕೇಳಿದಕೂಡಲೇ ಹೊನ್ನಮ್ಮ ಸಿಂಗ ರಾರ್ಯರ ಮನೆಗೆ ಹೋಗಿ ಕೃತಿಚೌರ್ಯಮಾಡಿದ್ದಳು.

ಇಲ್ಲಿ, ಒಂದು ಸಂಶಯವನ್ನು ಪರಿಹರಿಸಿ, ಕನ್ನಡ ಸಾಹಿತ್ಯರಂಗದಲ್ಲಿ ಶಾಂತಿ ನೆಲಸುವಂತೆ ಮಾಡಲು ಯತ್ನಿಸುತ್ತೇನೆ.

ಸಾಹಿತ್ಯ ಚರಿತ್ರಕಾರರು ಹೀಗೆಂದಿದ್ದಾರೆ '...ಏಸುತ್ತಾ ಹೋಗಿ ಸಂಚಿಯು ಹೊನ್ನಮ್ಮ ಅಂತಃಪುರದಲ್ಲಿ ಸವತಿಯಾಗಿ ಸೇರಿರಬಹುದೆಂದೂ ...' ಅವಳ ಕಾವ್ಯಸರಣಿ ಈ ರೀತಿಯಾಗಿ ಸೂಚಿಸುತ್ತದೆಯೆಂದು ಅವರು ತಿಳಿಸುತ್ತಾರೆ. "ನಿನ್ನವಳೆನಿಸಿ .... ನಿನ್ನ ಸೇವೆಗೈದು ....ಚಿಕದೇವರಾಯನ ಸಂಚಿಯು ಹೊನ್ನಮ್ಮ" ಇತ್ಯಾದಿಯಾಗಿ ಸಿಂಗರಾರ್ಯನು ಹದಿಬದೆಯ ಧರ್ಮದಲ್ಲಿ ಬರೆದಿರುವುದರಿಂದ ಸಾಹಿತ್ಯಚರಿತ್ರಕಾರರ ಊಹೆ ಸರಿಯೆನ್ನಿಸುವುದು ಸಹಜ. ಆದರೆ ಅವರು ತಮ್ಮ ಈ ಊಹೆಯನ್ನು— at least to avoid possible embarassments—ಹೊರಗೆಡಹದಿದ್ದರೆ ಚೆನ್ನಿತ್ತು. ಅವರು ಹೀಗೆಂದುದನ್ನು ನರಸಿಂಹಶಾಸ್ತ್ರಿಗಳು ವಿರೋಧಿಸಿದರು, ಸಂಚಿಯು ಹೊನ್ನಮ್ಮ ಸವತಿಯಾಗಲಿಲ್ಲ ಎಂದವರು ಹೇಳಿದರು. ಈ ಅಂತಃಪುರ ವಾರ್ತೆ ಬಹಿರಂಗವಾಗಿ ಚರ್ಚಾ ವಿಷಯವಾದುದಕ್ಕೆ ನಮ್ಮ ಸಂಮತಿ ಇಲ್ಲ. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಹೀಗಾಗಿದ್ದರೆ, ಈ ಚರ್ಚೆಗೆ ಕಾರಣವಾದವರೆಲ್ಲರನ್ನೂ ಅವರು ಇಡೀ ನುಂಗುತ್ತಿದ್ದರೆಂಬುದರಲ್ಲಿ ಸಂಶಯವಿಲ್ಲ. ಅದೇನೇ ಇರಲಿ ಅಪ್ರತಿಮವೀರರಿಗೂ ಸಂಚಿಯು ಹೊನ್ನಮ್ಮನಿಗೂ ಒಂದು ರೀತಿಯ ಪ್ಲೆಟಾನಿಕ್ ಪ್ರೇಮವಿತ್ತೆಂದು ನಾವು ತೀರ್ಮಾನಿಸಿದ್ದೇವೆ, ಇರಲಿ

ಓಲಗ ಮುಗಿದೊಡನೆ ಸಿಂಗರಾರ್ಯ, ಸತ್ತೆನೋ ಕೆಟ್ಟೆನೋ ಎಂದು ಮನೆಗೆ ಓಡಿದ. ಅಲ್ಲಿ 'ಪದ್ಮಿನೀ ಕಲ್ಯಾಣ' ಮಂಗಮಾಯವಾಗಿತ್ತು. 'ಹೇ! ಆಂಡವಾ!' ಎಂದು ಸಿಂಗರಾರ್ಯ ಉದ್ಗರಿಸಿ, ಹತಾಶನಾಗಿ ಬಿದ್ದು ಬಿಕ್ಕಿಬಿಕ್ಕಿ ಅತ್ತನು. ಸ್ವಲ್ಪ ಹೊತ್ತಿನನಂತರ ಅವನಿಗೆ ಒಂದು ಐಡಿಯಾ ಹೊಳೆಯಿತು. ಶ್ರೀ ಹರ್ಷನ 'ರತ್ನಾವಳಿ'ಯನ್ನು ಕದ್ದು, ತಿರುಮಲಾರ್ಯರು 'ಮಿತ್ರವಿಂದಾ ಗೋವಿಂದ'ವನ್ನು ಬರೆದುದು ಅವನಿಗೆ ತಿಳಿದಿತ್ತು. ಕಂಡವರ ಸ್ವತ್ತು ಕದ್ದವನಿಂದ, ಆ ಸ್ವತ್ತನ್ನು ಕದ್ದರೆ ಪಾಪವಿಲ್ಲವೆಂದು ನಿರ್ಧರಿಸಿದ ಸಿಂಗರಾರ್ಯ (may his tribe increase!) ಅಣ್ಣನ ಮನೆಗೆ ಓಡಿದ. ಇತ್ತ ಅಪ್ರತಿಮವೀರರು, ತಮ್ಮ ಆದರ್ಶರಾಜ ನೃಪತುಂಗನಂತೆ ನಿದ್ದೆಮಾಡದೆ, ಮುಖಕ್ಕೆ ಕರಿವಾಡ ಹಾಕಿ ಕತ್ತಲಿನಲ್ಲಿ ಮೆಲ್ಲಮೆಲ್ಲನೆ ತಿರುಮಲಾರ್ಯರ ಮನೆಯ ಕಡೆಗೆ ಹೊರಟರು.

ತಿರುಮಲಾರ್ಯರು, ಪ್ರಧಾನಮಂತ್ರಿಪದವಿಯ ಜವಾಬ್ದಾರೀ ಕೆಲಸಗಳನ್ನು ಮುಗಿಸಿಕೊಂಡು ಹತ್ತುಗಂಟೆಗೆ ಮನೆಗೆ ಬಂದರು ಊಟಮಾಡಿ, ಮೆಣಸಿನಸಾರು ಕುಡಿದು, ಆಕಳಿಸಿ ಚಿಟಿಕೆ ಹೊಡೆದು 'ಣಾರಾಯನಾ' 'ಪರವಾಸುದೇವಾ' ಎಂದು ಕವಿಸಮ್ಮೇಳನದ ಕನಸು ಕಾಣುತ್ತಾ ಮಲಗಿದರು.

ನಡುರಾತ್ರಿಯ ಸಮಯ. ಕಾರ್ಗತ್ತಲು ಯಾನೇ ಗಾಢಾಂಧಕಾರ, ಕಾವಲರು ತೂಕಡಿಸುತ್ತಿದ್ದಾರೆ, ಸಿಂಗರಾರ್ಯ ಮೆಲ್ಲನೆ ನುಸುಳಿ ತಿರುಮಲಾರ್ಯರ ತಲೆದೆಸೆಯ ಗೂಡಿನಲ್ಲಿದ್ದ 'ಮಿತ್ರವಿಂದಾ ಗೋವಿಂದ'ವನ್ನು ಕೈಗೆ ತೆಗೆದುಕೊಂಡ. ಅಷ್ಟರಲ್ಲಿ

ಹೊರಗೆ ಸಪ್ಪಳವಾದುದರಿಂದ ಪುಸ್ತಕದೊಡನೆ ಮಂಚದಡಿಗೆ ಸೇರಿದ. ಸಾಕ್ಷಾತ್ ಅಪ್ರತಿಮವೀರರು ಕೋಣೆಗೆ ಧುಮುಕಿದರು. 'ಚಿಕದೇವರಾಜ ಬಿನ್ನಪ' 'ಗೀತ ಗೋಪಾಲ'ಗಳನ್ನು ಎಳೆದುಕೊಂಡು ಚಂಗನೆಗರಿ, ನಿಮಿಷಾರ್ಧದಲ್ಲಿ ಮಾಯವಾದರು.



ಸಿಂಗರಾರ್ಯನೂ ಅವರ ಹಾದಿಯನ್ನೇ ಹಿಡಿದ.

ಬೆಳಗಾಯ್ತು. ಪುಸ್ತಕಗಳಿಲ್ಲ. ತಿರುಮಲಾರ್ಯರು, ತಮ್ಮ ಹೆಂಡತಿಯನ್ನು ಕರೆದು "ಇಂಗೆವಾ. ಎನ್ ಪುಸ್ದಗಂ ಎಂಗೆ ಪೋಚಿ?" ಎಂದು ಪ್ರಶ್ನಿಸಿದರು

"ತಿರುಡಿಕೊಂಡು ಪೋನಾರ್" ಎಂದರು ತಿ. ಪ.

"ಆರ್?"

"ರೆಂಡು ಮಕರಾರ್ಜ ತಿರುಂಬಿ ಒಂಣು ತಂಬಿ"


ತಮಿಳು ಚಿತ್ರದ ಉತ್ತರಾರ್ಧದಲ್ಲಿ, ಖಳನಾಯಕನು, ನಾಯಕಿಯನ್ನು ಲಪಟಾಯಿಸಿಕೊಂಡುಹೋದಾಗ, ನಾಯಕನು ಗರ್ಜಿಸಿದಂತೆ ತಿರುಮಲಾರ್ಯರು "ಪಾರ್ಕಲಾಂ" ಎಂದು ಗುಡುಗಿದರು

ಆ ದಿನದ ಕವಿಸಮ್ಮೇಳನದಲ್ಲಿ ಅವರ 'ಪಾರ್ಕಲಾಂ' ನಿಷ್ಪ್ರಯೋಜನವಾಯ್ತು. ರಾಜಾಧಿರಾಜ ಶ್ರೀಮದಪ್ರತಿಮವೀರರು 'ಚಿಕ್ಕದೇವರಾಜ ಬಿನ್ನಪ' 'ಗೀತಗೋಪಾಲ' ಎರಡೂ ತಮ್ಮವೆಂದು ನಿರ್ದಾಕ್ಷಿಣ್ಯವಾಗಿ ಸಾರಿದರು. ಹದಿಬದೆಯಧರ್ಮ ತನ್ನದೆಂದು ಹೊನ್ನಮ್ಮನೂ, ಪದ್ಮಿನೀ ಕಲ್ಯಾಣ ತನ್ನದೆಂದು ಶೃಂಗಾರಮ್ಮನೂ ಹೇಳಿದರು. ಚಿಕ್ಕುಪಾಧ್ಯಾಯನು, ದುನಿಯಾದೊಳಗಿನ ಸಮಸ್ತ ಪುರಾಣಗಳಿಂದಲೂ ಕದ್ದ, ಜಿಂದಗಿಯ ಸಾರೀ ಪುಣ್ಯಕ್ಷೇತ್ರಗಳ ಮಹಾತ್ಮೆಗಳನ್ನೂ ಒಟ್ಟಿ 'ಮಹಾಪ್ರಭೋ! ತಮ್ಮ ದಾಸನ ಕಾಣಿಕೆ' ಎಂದ. 'ಮಿತ್ರವಿಂದಾ ಗೋವಿಂದ' ತನ್ನದು ಎಂದು ಹೇಳಿ

ಸಿಂಗರಾರ್ಯನು ಘೋಷಿಸಿದ. ಹಾಗಾದರೂ ತಿರುಮಲಾರ್ಯರು ಎದೆಗುಂದಲಿಲ್ಲ. 'ಅಪ್ರತಿಮವೀರಚರಿತೆ' ನನ್ನ ಇಂದಿನ ಕಾಣಿಕೆ ಎಂದರು. ಅಪ್ರತಿಮವೀರರು ಅದನ್ನು ಓದಿ ಸಂತೋಷಿಸಿ 'A very original work' ಎಂಬ ಪ್ರಶಂಸೆ ಮಾಡಿದರು. ನಿಜವಾಗಿಯೂ ಅದು ಹಾಗಲ್ಲ. ಅದೂ ಕೂಡ ಚೋರ್‌ಬಜಾರಿನ ಮಾಲು. 'ಕುವಲಯಾನಂದ'ದ ಹಸೀ ಕೃತಿಚೌರ್ಯ.

ಕನ್ನಡ ಸಾಹಿತ್ಯವು ಕನ್ನಡದ ನಂದಾದೀಪ, ಕರ್ನಾಟಕದ ತವನಿಧಿ ಎಂಬ ಶ್ರದ್ಧೆ ಕನ್ನಡಿಗರಲ್ಲಿಯೇ ಬೆಳೆಯದಿದ್ದರೆ ಇತರರಲ್ಲಿ ಹೇಗೆ ಬೆಳೆದೀತು ಎಂದು ಸಾಹಿತ್ಯ ಚರಿತ್ರಕಾರರು ಸವಾಲು ಹಾಕಿದಾರೆ. ಇತರರಿಗೆ ಅಂದರೆ ಕನ್ನಡ ತಿಳಿಯದ ಬಕರಗಳಿಗೆ ಕನ್ನಡ ಸಾಹಿತ್ಯವು ಕನ್ನಡದ ನಂದಾದೀಪ ಎಂದು ಹೇಳಿ ಒಪ್ಪಿಸಿಬಿಡಬಹುದು. ಬಿಟ್ಟೂ ಇದ್ದೇವೆ. ಆದರೆ ನಿಜಸಂಗತಿಯನ್ನರಿತ ಕನ್ನಡಿಗರಿಗೆ ಆ ಶ್ರದ್ಧೆ ಬೆಳೆಯುವುದು ಕೊಂಚ ಕಷ್ಟವೇ ಸರಿ. ಹೌದೋ ಅಲ್ಲವೋ ಎಂಬುದನ್ನು ಸಾಹಿತ್ಯ ಚರಿತ್ರಕಾರರೇ ಹೇಳಬಿಡಲಿ.

— ಅ. ರಾ. ಸೇ.



ವಾಣ್ಯಾಗು! ಸಾಮೀ! ನಿಮ್ಮ ಮಗನನ್ನು ಇಂಗ್ಲೆಂಡಿಗೆ ಕಳಿಸಬೇಕು!
ಈ ನಯಾ ಪೈಸಾ ಲೆಕ್ಕ ಇವನಿಗೆ ಈ ಜನ್ಮದಲ್ಲಿ ಹತ್ತುಲ್ಲ!!

★ Balanced Dietಉ! ★

ಅನ್ನದ ಕಾಳು ಹತ್ತು,
ಹುಳಿ ಹೋಳು ಎರಡು,
ಬಿಸ್ಕತ್ತು ಮೂರು,
ಪೆಪ್ಪರ್‌ಮೆಂಟ್ ಆರು,
ಹಾಲೊಂದು ಪಾವು,
ನೀರೊಂದು ಪಾವು—
ಅಮ್ಮನ್ಜೊತೆಗೆ ಕಾಫಿ
ಅಪ್ಪನ್ಜೊತೆಗೆ ಟೀ
ಅಜ್ಜನ್ಜೊತೆಗೆ ಹಾರ್ಲಿಕ್ಸ್—
ಎಲ್ಲಾ ಕೊಂಚ ಕೊಂಚ
ಆಸ್ಟರ್‌ಮಿಲ್ಕು, ಕ್ಯಾಸ್ಟರಾಯಿಲ್
ಅದೂ ಕೊಂಚ ಕೊಂಚ.
ಅಂ ....
ಕುಂಕ್ಮ ಒಂದು ಚಿಮುಟ!
ಅರಿಶಿನ ಒಂದು ಚಿಮುಟ!
ಒಂದಿಷ್ಟು ಸಕ್ರೆ!
(ಮುಚ್ಚ ತೆಗೆದಿಟ್ರೆ)
ಒಂದ್ಬಾಯಿ ಪೌಡರು!
(ಡಬ್ಬಿ ಕೈಗೆ ಸಿಕ್ರೆ)
ಇಡ್ಲಿ, ಬೆರಣಿ, ಸೋಪು
ಒಂದೊಂದು ಚೂರು—
ಒಂದೋ ಎರಡೋ ಗುಟುಕು
ಬಟ್ಟೆ ಒಗೆದ ನೀರು!
—ಏನಿದು ಗುಟ್ಟು?
ಅಂದ್ರೆ ನಮ್ಮ ಪುಟ್ಟು
Balanced dietಉ!

(ಅಮೆರಿಕದ ಒಬ್ಬ 'ಪುಟ್ಟು'ವಿನ Balanced diet ವಿಚಾರ ಓದಿ ಬರೆದದ್ದು)

— ರಾಮಿ.

ಕನ್ನಡಿಗರಿಗೆ ಎಂಥ ಸಾಹಿತ್ಯ

ಇಂಗ್ಲೀಷು ಹಿಂದಿ ಇವೆರಡು ಭಾಷೆಗಳನ್ನೂ ಬಲ್ಲ ಕನ್ನಡಿಗರಿಗೆ ಈಗ ಕನ್ನಡದಲ್ಲೇ ಸಾಹಿತ್ಯ ಬೇಕಿಲ್ಲ. ಅವರು ಇಂಗ್ಲೀಷಿನಲ್ಲಿರುವ ಪತ್ತೇದಾರಿ ಕಾದಂಬರಿಗಳನ್ನೂ ಲಿಂಗ ಶಾಸ್ತ್ರದ ಪತ್ರಿಕೆಗಳನ್ನೂ ಓದಿ ಆನಂದಿಸಿಕೊಳ್ಳುತ್ತಾರೆ. ಹಿಂದಿ ಬಲ್ಲವರಿಗೆ, ಹಿಂದಿ ಸಿನಿಮ ಹಾಡುಗಳೇ ಸಾಕು, ಮನರಂಜನೆಗೆ. ಆದರೆ, ಇಂಗ್ಲೀಷನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲಾರದ ಕಾಲೇಜು ವಿದ್ಯಾರ್ಥಿಗಳಿಗೂ ವಿದ್ಯಾರ್ಥಿನಿಯರಿಗೂ ಹಿಂದಿ ಸಿನಿಮ ಹಾಡುಗಳನ್ನ ಹಾಡಲರಿಯದವರಿಗೂ, ಅವರನ್ನನುಕರಿಸುವುದೇ ಆಧುನಿಕ ನಾಗರಿಕತೆ ಎಂದು ತಿಳಿದಿರುವ ಹುಡುಗ ಹುಡುಗಿಯರಿಗೂ ಇಂದು ಅದೇ ತೆರನ ಮಾದಕ ಸಾಹಿತ್ಯ ಅತ್ಯಗತ್ಯ. ಇಂಥವರಿಗೆ, ತಂದೆ ಮಾವಂದಿರ ಮನಿ ಆರ್ಡರುಗಳ ಮೂಲಕವೇ ಜೀವನ ಸಾಗಿಸುತ್ತಿರುವುದರಿಂದ, ವಾರಕ್ಕೊಂದೂವರೆ ರೂಪಾಯಿ ಖರ್ಚುಮಾಡಿ ಅಚ್ಚುಕನ್ನಡದ ಪುಸ್ತಕಗಳನ್ನ ಕೊಂಡುಕೊಳ್ಳುವುದೂ ಸುಲಭ! ಆ ವಯಸ್ಸಿನಲ್ಲಿ, ಅವಿವಾಹಿತ ಯುವಕ ಯುವತಿಯರು, ಎಂಥ ಸಾಹಿತ್ಯವನ್ನು ಬಯಸುತ್ತಾರೆ, ಎಂಬುದನ್ನು ಕನ್ನಡತಾಯಿಯ ಗುಡಿಯ ಹಿರಿಯ ಅರ್ಚಕ ಶಿಖಾಮಣಿಗಳು ಅರಿತು, ಆಗಲೇ ಅನೇಕ ಉದ್ಗ್ರಂಥಗಳನ್ನ ಪ್ರಕಟಿಸಿ ಶ್ರೀಮಂತರಾಗಿದಾರೆ. ವೇಶ್ಯಾಗೃಹಗಳಿಗೆ ನುಗ್ಗಲು ಧೈರ್ಯವೂ ಸಂಪತ್ತೂ ಇಲ್ಲದ ಯುವಕರು ವೇಶ್ಯಾಜೀವನದ ಅವರ ಕಥೆ ಕಾದಂಬರಿಗಳನ್ನಾದರೂ ಕೋಣೆಯಲ್ಲಿ ಕುಳಿತು ಓದಿ ಸಂತೃಪ್ತರಾಗಲಿ, ಎನ್ನುವುದೇ ಇಂತಹ ಸಾಹಿತಿಗಳ ಸದುದ್ದೇಶ. ಜೊತೆಗೆ, ತಮಗೆ ಒಂದಿಷ್ಟು ಹಣವೂ ಸೇರಿತೆಂದರೆ, ಆ ಹೊಲಸಿಗೆ ಪ್ರಾಯಶ್ಚಿತ್ತರೂಪವಾಗಿ, ಭಕ್ತಿ ಗ್ರಂಥಗಳನ್ನೂ ಅನೇಕರು ಆಗೊಂದು ಈಗೊಂದು ಪ್ರಕಟಿಸಿ ಪುನೀತರಾಗಿ, ಪುರಸ್ಕಾರ ಪಡೆಯುತ್ತಿದಾರೆನ್ನುವುದು ಸ್ತುತ್ಯಾರ್ಹ.

ಈಚೆಗೆ, ಭಾರತೀಯ ಸಾಹಿತ್ಯಗಳಲ್ಲೆಲ್ಲ ವೇಶ್ಯಾಗ್ರಂಥಗಳು ಪ್ರಕಟವಾಗುತ್ತಿರುವುದಕ್ಕೂ, ವೇಶ್ಯಾಸಾಹಿತ್ಯಕಾರರು ಸುಪ್ರಸಿದ್ಧರಾಗುವುದಕ್ಕೂ, ಕಾರಣವೇನೆಂಬುದನ್ನು ಒಂದು ಸಮಿತಿ ಕೂಲಂಕುಷವಾಗಿ ಪರಿಶೀಲಿಸಿ ವರದಿ ಮಾಡಿದೆ. ಈ ವರದಿಯನ್ನು ಧಾರವಾಡದಲ್ಲಿ ಸೇರಲಿರುವ ಕನ್ನಡ ಸಾಹಿತ್ಯ ಸಮ್ಮೇಳನ ಪರಿಶೀಲಿಸುವುದು ಒಳ್ಳೆಯದು.

[ಅಮೇರಿಕನ್ ಮಹಿಳೆಯರ ಕಾಮುಕಜೀವನ, ಕಿನ್‌ಸಿವರದಿ, ಮುಂತಾದ ಗ್ರಂಥಗಳು ಅಮೇರಿಕಾ ದೇಶಕ್ಕಿಂತ ಭಾರತದಲ್ಲೇ ಹೆಚ್ಚು ಖರ್ಚಾಗುತ್ತಿವೆ ಎಂಬಂಶವನ್ನೂ ಈ ಸಂದರ್ಭದಲ್ಲಿ ನಾವು ಮರೆಯುವಂತಿಲ್ಲ]

ಸಮಿತಿಯ ವರದಿಯಲ್ಲಿರುವ ಮುಖ್ಯಾಂಶಗಳು ಇವು :—

೧. ಅಶ್ಲೀಲ ಕಥಾ ಸನ್ನಿವೇಶಗಳನ್ನೊಳಗೊಂಡ ಚಲಚ್ಚಿತ್ರಗಳೆಲ್ಲ ಪರಂಗಿಯವರ ಚಿತ್ರಗಳಾದ್ದರಿಂದ, ಅವನ್ನು ನೋಡುವುದರಿಂದ, ನಮ್ಮ ಜನಕ್ಕೆ ತಾದಾತ್ಮ್ಯ ಭಾವ ಅಂಕುರಿಸದೆ, ಕಾಮಪಿಪಾಸೆಗೆ ತಕ್ಕ ಉಪಶಾಂತಿ ದೊರೆಯುತ್ತಿಲ್ಲ.

೨. ಭಾರತೀಯ ಸನ್ನಿವೇಶಗಳಲ್ಲೇ ಇಂಥ ಕಥಾವಿವರಣೆಯನ್ನು ಕೊಟ್ಟರೆ, ದೇಶೀಯ ಭಾಷೆಗಳಲ್ಲಿ ಅಸಹ್ಯ ಗ್ರಂಥಗಳ ಮಾರಾಟ ಓದಾಟ ಕಡಮೆಯಾಗುತ್ತದೆ.

೩. ಹಾಗೆ ಮಾಡುವುದು ಅಗತ್ಯ ...ಏಕೆಂದರೆ, ಹಾದರದ ವಿವರಣೆಗಳನ್ನು ವಾಚಕರು ಒಬ್ಬನೇ ಕುಳಿತೋದುವುದು ಹೆಚ್ಚು ಅಪಾಯಕರ.

೪. ಸ್ವತಃ ದುಡಿದು ತಿನ್ನುವವರು ಈ ಅಶ್ಲೀಲ ಕಾದಂಬರಿಗಳನ್ನು ಕೊಂಡು ಓದುವುದು ಕಡಮೆ; ಪರಾವಲಂಬಿ ಮನೋಭಾವ ಇರುವವರೇ, ಇಂತಹ ಪರಚೇಷ್ಟಾಪ್ರಿಯರು.

೫. ಈಗಿನ ಪರಿಸ್ಥಿತಿಯಲ್ಲಿ, ವಿವಾಹವಾಗದೆ, ಹೋಟಲೂಟಮಾಡುತ್ತ, ಬೇಸರದ ನೌಕರಿಗಳಿಗೆ ಸೇರಿ, ಮಹಡಿಮೇಲಿನ ಕೋಣೆಗಳಲ್ಲಿ ನಾಲ್ಕಾರು ಯುವಕರು ಒಟ್ಟಿಗೆ ವಾಸಮಾಡುವ ನಗರದ ಹುಡುಗರೇ, ಸುಪ್ರಸಿದ್ಧ ಅಶ್ಲೀಲ ಬರಹಗಾರರ ಅಚ್ಚುಮೆಚ್ಚಿನ ಗಿರಾಕಿಗಳು. ಆದ್ದರಿಂದ, ಕಾರ್ಖಾನೆಗಳಲ್ಲೂ ಕಚೇರಿಗಳಲ್ಲೂ, ಆಟಪಾಟಗಳಿಗೆ ಹೆಚ್ಚು ವ್ಯವಸ್ಥೆಮಾಡಿ, ತಂಪು ಪಾನೀಯಗಳನ್ನೊದಗಿಸಿದರೆ, ವಾಸಕ್ಕೆ ಮನೆಗಳನ್ನು ಕಟ್ಟಿಸಿಕೊಟ್ಟರೆ, ಗಿರಾಕಿಗಳು ಅತಿವೇಗದಲ್ಲಿ ಕಡಿಮೆಯಾಗುವರು. ಸಾಹಿತಿಗಳಿಗೆ ಬೇಕಾದರೆ, ಪರಿಹಾರ ದ್ರವ್ಯ ಒದಗಿಸಿ ಬಾಯಿ ಮುಚ್ಚಿಸಬಹುದು.

೬. "ನವ್ಯಕಾವ್ಯ"ದ ಆವಿರ್ಭಾವ ಯುವಕ ಯುವತಿಯರ ಮಾನಸಿಕ ಆರೋಗ್ಯದ ದೃಷ್ಟಿಯಿಂದ, ಒಂದು ಶುಭ ಸೂಚನೆ! ಏಕೆಂದರೆ, ಈ ಕಾವ್ಯಗಳನ್ನು ಓದುವುದು ಆಧುನಿಕರ ಲಕ್ಷಣ, ಎಂಬ ಅಭಿಪ್ರಾಯದಿಂದ ಯುವಕರೆಲ್ಲರೂ, ಅದನ್ನೇ ಪಠಿಸುವರು! ಪಠಿಸಲಿ, ಪಾಪ! ಅರ್ಥವಾದರೆ ತಾನೆ, ಅನಾಹುತ? ಯಾವುದೋ ಗೀರ್ವಾಣ! ಮಂತ್ರದಂತೆ ಅದನ್ನು ಉರು ಹೊಡೆದು ನವ್ಯಕಾವ್ಯ ಗುರುವಿಗೆ ತೃಪ್ತಿ ಉಂಟುಮಾಡುತ್ತಾರೆ, ಅಷ್ಟೆ. ಕನ್ನಡದಲ್ಲಿ ಹಿಂದೆ, ಅಶ್ಲೀಲ ಕಾವ್ಯಗಳನೇಕವಿತ್ತು. ಅವನ್ನ ಹುಡುಗರೋದಿದರೆ, ಅಲ್ಪಸ್ವಲ್ಪ ಅರ್ಥವಾಗುವುದು. ಅದಕ್ಕಾಗಿ, ಅವನ್ನು ಹಿರಿಯರು ಗೋಪ್ಯವಾಗಿಟ್ಟಿದ್ದರು. ಆದರೆ, ಈಗ, ಜನತೆಯಲ್ಲಿ ಪ್ರತಿಷ್ಠೆ ಪಡೆದಿರುವ ಈ ನವ್ಯಕಾವ್ಯಗಳು, ಕವಿಗೇ ಒಂದೊಂದುಸಲ ಒಂದೊಂದರ್ಥವನ್ನು ಒದಗಿಸುತ್ತಾ ಇದ್ದು ಪಾಠಕರಿಗಂತೂ ಪರದಾಟವಾಗಿರುವುದರಿಂದ, ಇಂಥ ಕಾವ್ಯಗಳಿಗೆ ಹೆಚ್ಚು ಪ್ರೋತ್ಸಾಹ ಕೊಟ್ಟು, ಬೆಳೆಸಬೇಕಾದ್ದು ಅಗತ್ಯ.

೭. ಈಗ, ಮಹಾಜನಪ್ರಿಯರಾಗಿ, ಜನತಾಲೋಲುಪತೆಯನ್ನು ಕೆರಳಿಸುತ್ತಿರುವ, ಕಾದಂಬರಿಗಳನ್ನು ಬರೆಯುತ್ತಿರುವ ಮಾನ್ಯರಾದ ಮಹಾ ಡಿಂಗರಿಗರೂ ಕೂಡ, ಈ ನವ್ಯಕಾವ್ಯ ಪದ್ಯ ಶೈಲಿಯನ್ನು ತಮ್ಮ ಲೇಖನಿಗೆ ಕಲಿಸಿದರೆ, ಬಹಳ ಒಳ್ಳೆಯದು. ಆದರೆ, ಆದೊಂದು ಬರಿಯ ಕನಸು! ಅವರ ಚಾಳಿಯನ್ನು ಅವರು ಬಿಡುವಂತೆಯೇ ಇಲ್ಲ.

೮. ಆದ್ದರಿಂದ, ಹೆಚ್ಚು ಗಾಳಿ ಬೆಳಕಿರುವ ಕೋಣೆಗಳು, ವಿಟಮಿನ್ ಎ ಹಾಗೂ ಡಿ ಬೆರೆಸಿದ ಆಹಾರ, ಕ್ಯಾಲ್‌ಸಿಯಂ ಕಡಮೆಯಿರುವ ನೀರು, ತಣ್ಣೀರು ಸ್ನಾನ, ಔಷಧೀಪೂರ್ಣ ಆಸ್ಪತ್ರೆಗಳು, ಕಚೇರಿಗಳ ಆವರಣದಲ್ಲೇ ಆಟಪಾಠ, ವಿವೇಕಾನಂದರ ಗ್ರಂಥಪ್ರಚಾರ, ಆದಷ್ಟುಬೇಗ ವಿವಾಹ, ಇವೇ ಶುದ್ಧ ಕನ್ನಡ ಸಾಹಿತ್ಯದ ಪುರೋಭಿವೃದ್ಧಿಗೆ ಉತ್ತಮ ಸಾಧನೆಗಳೆಂದೂ, ಈಗಿನ ಅವನತಿಗಾಗಿ, ಹಿರಿಯ ಸಾಹಿತಿಗಳಾರನ್ನೂ ತೆಗಳಿ ಫಲವಿಲ್ಲವೆಂದೂ, ಸಮಿತಿ ಅಭಿಪ್ರಾಯಪಡುತ್ತದೆ.


ಧಾರವಾಡ ಸಮ್ಮೇಳನದ ದೃಷ್ಟಿ ಇತ್ತ ಹರಿಯುವುದೆ?

ಕಾದು ನೋಡೋಣ.

— ಕಾಮತ್.

—o—

ದೂರುವವರು ದೂರಿಕೊಳ್ಳಲಿ—ನಯ ಪೈಸೆಯುಗ ಸ್ಥಿರವಾಗಿ ಹೋಯಿತು ಎಂಬುದರ ಕುರಿತು ಯಾರಿಗೂ ಅನುಮಾನಬೇಡ. ನಮ್ಮ ಪಕ್ಕದ ಮನೆ ಮುದುಕಯ್ಯನವರು ಕೂಡ ದಶಮಾಂಶ ಪದ್ಧತಿಗೆ ಹೊಂದಿಕೊಂಡುಬಿಟ್ಟಿದ್ದಾರೆ. "ಥೂ, ಮೂರು ಕಾಸಿನವನೇ!" ಎಂಬುದು ಅವರಿಂದ ಸದಾಕಾಲ ಹೊರಡುವ ಅತ್ಯಂತ ಪ್ರಿಯವಾದ ಬೈಗಳು. ಏಪ್ರಿಲ್ ೧ರಿಂದ ಅವರು "ಥೂ, ನಾಯಿ ಪೈಸೆಯವನೆ!" ಎಂದು ಉಗುಳುತ್ತಿದಾರೆ!



ನಯಾ ಪೈಸಾ ಜತೆಗೇ — ನಯಾ ಶಕೆಯೂ ಬಂತಲ್ಲಾ!!

ಗುಮ್ಮ ಬಂದ!


(ಒಂದು ಕೋಲಾಟದ—ಅಲ್ಲ—ಗನ್ನಾಟದ ಹಾಡು—ಪಾಕಿಸ್ತಾನದ
ಜನತೆ ಹಾಗೂ ಜನನಾಯಕರಿಗೆ ಅರ್ಪಿತ)

ರೊಟ್ಟೀ ಕೊಡಯ್ಯ ನಮಗೆ ಜನನಾಯ್ಕ—
ಕಾಸ್ಮೀರ ಬರೋ ತನಕ ಕೊಂಚ ತಾಳ್ರೋ!
ಬಟ್ಟೇ ಕೊಡಯ್ಯ ನಮಗೆ ಜನನಾಯ್ಕ—
ಕಾಸ್ಮೀರ ಬಂದ ಮ್ಯಾಕೆ; ಕೊಂಚತಾಳ್ರೋ!
ಕೆಲಸಾ ಕೊಡಯ್ಯ ನಮಗೆ ಜನನಾಯ್ಕ—
ಕಾಸ್ಮೀರ ಬರಲಿ ನಮಗೆ; ಕೊಂಚ ತಾಳ್ರೋ!
ಸಾಲಾ ಕೊಡಯ್ಯ ನಮಗೆ ಜನನಾಯ್ಕ—
ಕಾಸ್ಮೀರ ಬರ್ತೈತೆ ಕೊಂಚ ತಾಳ್ರೋ!
ಎಲೆಕ್ಸನ್ನ ನಡ್ಸೊ ಬೇಗ ಜನನಾಯ್ಕ—
ಕಾಸ್ಮೀರ ಬಂದ್ಬಿಡ್ತು ಕೊಂಚ ತಾಳ್ರೋ!
ಬಡಿಗೆ ಹಿಡಕೊಂಡ್ ಚಚ್ಚ್ತೀವಿ ಜನನಾಯ್ಕ—
ಕಾಸ್ಮೀರ ವೋಗ್ತೈತೆ ಎದ್ದೇಳ್ರೋ!
ವೋಗೋದ್ ವೋಕ್ಕೊಣ್ಲಿ ಬಿಡು ಜನನಾಯ್ಕ
ನೆಹರು ಎತ್ಕೊಂಡ್ಹೋಗ್ತಿದ್ದಾನೆ ಎದ್ದೇಳ್ರೋ!
ಇದ್ದಷ್ಟೆ ಸಾಕು ನಮಗೆ ಜನನಾಯ್ಕ—
ಪಾಕಿಸ್ತಾನ ವೋಗ್ಬುಟ್ಟೀತು ಎದ್ದೇಳ್ರೋ!
ವೋಗಾದಾದ್ರೂ ಯೆಂಗದೇಳು ಜನನಾಯ್ಕ—
ನೆಹರು ನುಗ್ಗಿ ಬರ್ತಾನಂತೈ ಜನನಾಯ್ಕ?
ಔದ್ರಪ್ಪ ಬರ್ತಿದಾನೆ, ಎದ್ದೇಳ್ರೋ!
ಬಲಿ ಆಕ್ತೀವಿ ನುಗ್ಗಿ ಬಂದ್ರೆ ಜನನಾಯ್ಕ—
ಇಸ್ಲಾಂದರ್ಮ ಉಳ್ಸೋದಕ್ಕೆ ಎದ್ದೇಳ್ರೋ!
ರಕ್ತ ಕೊಡೋಕ್ ಸಿದ್ದನಾವು ಜನನಾಯ್ಕ!
ಧರ್ಮ ದೇವ್ರು ದೊಡ್ಡು ನಮಗೆ ಎದ್ದೇಳ್ರೊ!
'ಜೀಹದ್' ಅಂತೀವಿ ನಾವು ಜನನಾಯ್ಕ!

ಕಾಶ್ಮೀರ ಕಿತ್ಕೋಳ್ಬಿದ್ರೆ ನಾವ್ ಯಾಕ್ರೊ!
ಡಿಲ್ಲಿ ತನಕ ನುಗ್ಗ್ತೀವಿ ಜನನಾಯ್ಕ!
ಹೊಟ್ಟೆ ಬಟ್ಟೆ ಮುಖ್ಯವಲ್ಲ ಎದ್ದೇಳ್ರೋ!
ಕಾಫಿರ್ ರಕ್ತ ಸಾಕು ನಮಗೆ ಜನನಾಯ್ಕ!
ಯೇಳೋದಿದ್ರೆ ಯಿನ್ನೊಂದ್ಸಲ ಅದನೆ ಯೇಳ್ರೊ!
ದಿವಸಕ್ ಸಾವ್ರಸಲ ಯೋಳ್ತಾನ ಜನನಾಯ್ಕ!

(ಗಣನಾಯ್ಕನ ನಸುನಗೆಯು ಕ್ಷಮೆ ಯಾಚಿಸಿ)

— ರಾಮಿ.



ಶ್ರೀಮತಿ ಮ್ಯಾಡಂ! ಚುನಾವಣೇಲಿ ನೀವು ಸೋತರೂ ನಿಮಗೆ ನಾನು ಸೋತಿದೇನೆ!
ಇನ್ನು ಹ್ಞೂ ಅನ್ನಬಾರದೇ?

ಪ್ರಾಣೇಶ ಪ್ರಸಂಗ

ನಯಾ ಪೈಸಾ

ಎನ್ಮೆಲ್ಲೆಯಾದ ಡಾಕ್ಟರ್ ಕಿಟ್ಟೂರಯ್ಯನ ಗೌರವಾರ್ಥವಾಗಿ ನಡೆದ ಸತ್ಕಾರ ಕೂಟಗಳಲ್ಲಿ ಪ್ರಾಣೇಶ ಗೋಪಣ್ಣರದೇ ಮೊದಲನೇದು ಅದೇ ದಿನ 'ನವದುಂಧುಭಿ' ಅಚ್ಚಾಗುತ್ತಿದ್ದ 'ಇಂಪೀರಿಯಲ್ ಮುದ್ರಣಾಲಯ' ಪ್ರಾಣೇಶನ ಕೈಗೆ ಬಂದು 'ರಿಪಬ್ಲಿಕ್ ಪ್ರೆಸ್' ಎನ್ನಿಸಿಕೊಂಡು ಹೊಸ ಮೆಂಬರಿಂದ ಉದ್ಘಾಟನೆಗೊಂಡಿದ್ದು. ಇಂಪೀರಿಯಲ್ ಹೋಗಿ 'ರಿಪಬ್ಲಿಕ್' ಆದರೂ ಪ್ರೆಸ್ಸು ಪರವಾಯಿಲ್ಲ ಎನ್ನುವ ಹಾಗಾಗಬೇಕಾದರೆ ಕೊನೆಯ ಪಕ್ಷ ಒಂದು ಪಂಚವಾರ್ಷಿಕ ಯೋಜನೆಯಾದರೂ ಬೇಕೆನ್ನಿ. ಸದ್ಯ ಹೇಳಿಕೊಳ್ಳಬಹುದಾದ್ದೆಂದರೆ ಒಂದು ಹೈಡಲ್‌ಬರ್ಗ್ ಮಾತ್ರ ಅಂತೂ ಗೋಪಣ್ಣನ ಇಲೆಕ್ಷನ್ ವೆಚ್ಚವೆಲ್ಲ ಕಾಸಿಗೆ ಕಾಸು ಹಿಂದೆ ದೊರಕಿದ್ದರಿಂದ 'ನವದುಂದುಭಿ'ಗೆ ಒಂದು ಸ್ವಂತ ಪ್ರೆಸ್ ಆದಹಾಗಾಯಿತು. ಆದರೆ ಹಳೇ ಇಂಪೀರಿಯಲ್ಲಿನ ಕಸಧೂಳು ಝಾಡಿಸಲು ಒಂದುವಾರವೇ ಬೇಕಾಯಿತು.

ಅಸೆಂಬ್ಲಿಯಲ್ಲಿ ಕುರ್ಚಿ ಬಿಸಿಮಾಡುವ, ಅಥವಾ ಅಲ್ಲಿನ ವಾತಾವರಣದಲ್ಲಿ ಬಿಸಿ ಏರಿಸುವ ಯೋಗವಿಲ್ಲದಿದ್ದರೆ ಚಿಂತೆಯಿಲ್ಲ—ರಚನಾತ್ಮಕ ಕಾರ್ಯದಲ್ಲಿ ತೊಡಗಿ ಜನಸೇವೆ ಮಾಡುತ್ತೇವೆ ಎಂದು ಗೋಪಣ್ಣ ಕೊಚ್ಚಿಕೊಂಡಿದ್ದಕ್ಕೂ ಸರಕಾರದವರು ನಯಾ ಪೈಸವನ್ನು ಛೂಬಿಟ್ಟದ್ದಕ್ಕೂ ಸರಿಹೋಯಿತು. ಹೊಸ ನಾಣ್ಯ ಪದ್ಧತಿಯ ಕುರಿತು ಹೆಚ್ಚಿನ ಪರಿಚಯವನ್ನು ಜನರಿಗೆ ಮಾಡಿಕೊಡಲು ನವದುಂದುಭಿ ಕಂಕಣ ತೊಟ್ಟಿತು. ಮಾತ್ರವಲ್ಲದೆ ಪ್ರಾಣೇಶ ಗೋಪಣ್ಣ ಹಳ್ಳಿ ಕಡೆಗೂ ಕೂಲಿಗಾರರ ವಸತಿಗಳಿಗೂ ಹೋಗಿ ಅರಿಯದ ಜನರಿಗೆ ಹೊಸ ನಾಣ್ಯದ ಲೆಕ್ಕಾಚಾರವನ್ನು ಹೇಳಿಕೊಡಬೇಕೆಂದು ನಿಶ್ಚಯಿಸಿದರು. ಸರಳಾ ಕೂಡ ಸಮಾಜದ ಗೆಳತಿಯರನ್ನು ಕಟ್ಟಿಕೊಂಡು ಅಲ್ಲಿ ಇಲ್ಲಿ ಅಲೆದಾಡಿ ಅನಕ್ಷರಸ್ಥ ಮಹಿಳೆಯರಿಗೆ ನಯಾ ಪೈಸಾದ ಪರಿಚಯ ಪ್ರಚಾರ ಕೈಕೊಂಡಳು. ಆದರೆ ಎರಡೇ ದಿನಗಳಲ್ಲಿ ಅವಳು ತಣ್ಣಗಾದದ್ದನ್ನು ಕಂಡು ನಮಗೆ ಆಶ್ಚರ್ಯವಾಯಿತು. "ಹೊಸ ನಾಣ್ಯಗಳನ್ನೆಲ್ಲ ಹಿಂದೆ ಹಿಂದೆ ತೆಗೆದುಕೊಂಡಾಗ ಹೊಸತು ತಾನಾಗಿ ಬಳಕೆಯಾಗುತ್ತದೆ" ಎಂದು ಸಮಾಧಾನ ತಂದುಕೊಂಡು ಅವಳು ಅತ್ತ ವೀಣೆ, ಇತ್ತ ಹಿಂದಿ, ಮತ್ತೆ ಸಮಾಜ ಎಂದು ಅದರಲ್ಲೇ ಮುಳುಗಲು ನಿಶ್ಚಯಿಸಿದ ಹಾಗೆ ಕಾಣುತ್ತದೆ. ಇಲೆಕ್ಷನ್ ಅವಧಿಯ ಅನುಭವಗಳೇ ಅವಳಿಗೆ ತೀರ ಕಟುವಾಗಿ ಕಂಡುಬಂದವು. ಅಲ್ಲದೆ "ನಯಾ ಪೈಸ"

ಎಂದು ಸರಿಯಾಗಿ ಹೇಳಿ ಎಂದು ಹೇಳಿಕೊಟ್ಟರೆ ಬೇಕಂತಲೇ ಅದನ್ನು 'ನಾಯಿ ಪೈಸೆ' ಎಂದು ಒತ್ತಿ ಹೇಳಿ ಹೀಯಾಳಿಸುವ ಶತ ಒರಟು ಜನಗಳ ಮುಂದೆ ಅವಳ ಉಪದೇಶದ ಚಿಲುಮೆ ಬತ್ತಿಹೋಗಿರಬೇಕು.

ಆದರೆ ನಾವು ಅಷ್ಟು ಬೇಗನೆ ನಿರಾಶರಾಗಲಿಲ್ಲ. ಮೊತ್ತಮೊದಲು ಹೊಸನಾಣ್ಯ ಹಿಡಿದುಕೊಂಡು ನಾವು ಹಳ್ಳಿ ಕಡೆಗೆ ಹೊರಟಾಗ "ಏನು ಸ್ವಾಮಿ ಒಂದು ಎಲೆಕ್ಷನ್ ಆಗಲೇ ಮುಗೀತಲ್ಲ. ಇನ್ನೊಂದು ಬಂತೆ?" ಎನ್ನುತ್ತಾ ಜನರು ನಮ್ಮನ್ನು ಸ್ವಾಗತಿಸಿದರು. ನಮಗೆ ಬಾಯಿ ತೆರೆಯಲು ಅವಕಾಶಕೊಡದೆ "ತಲಾ ಐದು ತೆರೋದಕ್ಕೆ ಸಾಧ್ಯವಿಲ್ಲದಿದ್ದರೆ ಈ ಸಲ ನಮ್ಮ ಹಳ್ಳಿಯೊಳಗೆ ಕಾಲಿಡಬೇಡಿ"—ಎಂದ ಒಬ್ಬ ಹೈದ. "ಬಿಟ್ಟಿ ಓಟಿನ ಆಸೆ ಬುಟ್ಬುಡಿ" ಎಂದು ಮೀಸೆ ಹುರಿಮಾಡಿದ ಅಲ್ಲಿನ ಪೈಲವಾನ.

"ಅಯ್ಯೋ ಮಹರಾಯರಾ ನಾವು ಓಟಿಗೆ ಬಂದಿದ್ದಲ್ಲ"—ಎಂದು ನಾವು ಬಂದ ಕಾರಣವನ್ನು ತಿಳಿಸಿದೆವು.

"ಓಹೋ ಹಂಗೇನು! ಹಾಗಿದ್ದರೆ ಹೊಸ ನಾಣ್ಯ ತಲಾ ಎಷ್ಟೆಷ್ಟು ಹಂಚುತ್ತೀರಿ?" ಎಂಬ ಪ್ರಶ್ನೆ ಬಂತು.

"ನಾವು ಹಂಚೋದಲ್ಲಪ್ಪ. ಹಂಚೋದು ಸರಕಾರ."

"ಮತ್ತೆ ನಿಮ್ಮಗಳದೇನು ಆಟ ಇದು?"

"ಆಟವೆ? ಹೊಸ ನಾಣ್ಯಗಳು ಯಾವು ಯಾವುದಕ್ಕೆ ಎಷ್ಟೆಷ್ಟು ಬೆಲೆ, ಅವುಗಳ ಲೆಕ್ಕಾಚಾರವೆಲ್ಲ ಹೇಗೆ—ಅದನ್ನ ತಿಳಿಸೋದಕ್ಕೆ ಬಂದಿದೀವಪ್ಪ"—ಎಂದಾಗ ಅವರ ಮುಖಗಳೆಲ್ಲ ಸೌತೆಕಾಯಿಗಳಾದವು. ಅಲ್ಲಿನ ಪೂಟ್ ಲಾಯರ್ ಮಾತ್ರ ತುಂಬ ಆಸಕ್ತಿಯಿಂದ ನಾವು ವಿವರಿಸಿದ್ದನ್ನೆಲ್ಲ ಕೇಳಿ ತಿಳಿದುಕೊಂಡು ನಮ್ಮ ವಿವರಣೆ ಮುಗಿದ ಮೇಲೆ ನಾಲ್ಕು ನಾಲ್ಕು ಹೊಸ ನಾಣ್ಯಗಳನ್ನೂ ನಾಲ್ಕಾಣೆ, ಎಂಟಾಣೆ ರೂಪಾಯಿಯ ಒಂದೊಂದನ್ನೂ ಜೇಬಿಗೆ ಇಳಿಬಿಟ್ಟು "ಇವರಿಗೆಲ್ಲಾ ನಾನು ಕಲಿಸಿಕೊಡ್ತೀನಿ, ಇನ್ನೊಂದಿಷ್ಟು ನಾಣ್ಯ ಕಳಿಸಿಕೊಟ್ಟರೆ ಉಪಕಾರವಾಗುತ್ತೆ" ಎಂದ.

ಹಿಂದಿನ ಸಲ ಓಟು ಕೇಳಲು ಹೋದಾಗ ಬಡಿಗೆ ಎತ್ತಿದ ಮುದುಕಯ್ಯ, ನಯಾ ಪೈಸದ ವಿವರವನ್ನು ಆಮೂಲಾಗ್ರವಾಗಿ ನಾವು ವಿವರಿಸುವ ತನಕ ಎಲೆ ಅಡಿಕೆ ಜಗಿಯುತ್ತಿದ್ದು, ನಮ್ಮ ಪುರಾಣ ಮುಗಿದ ಕೂಡಲೆ ಹೊರಗೆ ಹೋಗಿ ತಂಬುಲ ಉಗಿದು ಬಂದು "ನೋಡ್ತಾ ಇರಿ ಹುಡುಗರಾ ಇನ್ನೊಂದು ತಿಂಗಳಲ್ಲಿ ನಿಮ್ಮ ನಾಯಿಪೈಸೆ ಛಟ್ ಎಂದು ಹೋಗಿಬಿಡುತ್ತೆ ಬಾಲ ಮುದುಡಿಕೊಂಡು" ಎನ್ನುತ್ತಾ ನರೆತ ಮೀಸೆಯನ್ನು ಸವರಿದರು. ಅವರು ಮತ್ತೊಮ್ಮೆ ಬಡಿಗೆ ಎತ್ತುವ ಮೊದಲೇ

ನಾವು ಎದ್ದು ಬಂದೆವು ಈ ಮುದುಕಯ್ಯ ಕೊಟ್ಟಂಥ ಶಾಪ ಅನಂತರ ಅನೇಕರ ಬಾಯಲ್ಲಿ ಬಂತು. ಕ್ರೈಸ್ತ ಹೆಂಗಸೊಬ್ಬಳು ನಯಾ ಪೈಸದ ನಾಶಕ್ಕಾಗಿ ನಾನು ಚರ್ಚಿಗೆ ಹೋಗಿ ಪ್ರತಿನಿತ್ಯ ಪ್ರಾರ್ಥಿಸುತ್ತಿದ್ದೇನೆ ಎಂದು ಭರವಸೆಯಿತ್ತಳು.

ಒಬ್ಬರು ದೊಡ್ಡಮನುಷ್ಯರು ನಾವು ನಯಾ ಪೈಸಾ ಪ್ರಚಾರಕರೆಂದು ತಿಳಿದುಕೊಂಡು ನಮ್ಮನ್ನು ಅಡ್ಡಗಟ್ಟಿ ಬೇಕಂತಲೆ ಸೆಣಸಿ ನಿಂತು "ಸರಕಾರ ಈ ನಯಾ ನಯಾಪೈಸದಿಂದ ಜನಗಳನ್ನು swindle ಮಾಡ್ತಾ ಇದೆ"—ಎಂದು ಮುಂತಾಗಿ ಎಗರಾಡಿದರು. ಯಾವ ಸಮಾಧಾನದ ಮಾತಿಗೂ ಅವರು ಕಿವಿ ಹಾಕದೆ "ಸರಕಾರ swindle ಮಾಡ್ತಾ ಇದೆ" ಎಂತ ಕೂಗುತ್ತಲೇ ಇದ್ದರು. "ನಿಮ್ಮದಲ್ಲವೇ ಸ್ವಾಮಿ ಸರಕಾರ? ಅಂದ ಮೇಲೆ ನಿಮ್ಮನ್ನು ನೀವೇ swindle ಮಾಡಿಕೊಂಡಿರಂತ ತಿಳೀತೀರಾ?" ಎಂದ ಪ್ರಾಣೇಶ. "ಮಾರ್ಚ್ ೧ನೇ ತಾರೀಖಿಗೆ ಬರಬೇಕಿತ್ತು ಈ ನಯಾಪೈಸ; ಆಗ ಉತ್ತರಕೊಡುತ್ತಾ ಇದ್ದೆ!" ಎಂದು ಒಂದಡಿ ನೆಗೆದು ಓಡಿಬಿಟ್ಟರು ಅವರು. ಅವರ ಜೊತೆಯಲ್ಲಿದ್ದ ಇನ್ನೊಬ್ಬರು "ಸಾಲದ್ದಕ್ಕೆ ಇದು 'silent revolution' ಅಂತ ಬೇರೆ ಹೇಳ್ಕೊಳ್ತಿದಾರೆ; ಅವರು ಹೇಳಿದಂತೆ ಇಲೆಕ್ಷನ್ನಿಗಿಂತ ಮುಂಚೇನೇ ಈ ಪೀಡೆ ಪೈಸಾ ಬಂದಿದ್ದರೆ ನಿಜವಾದ revolutionನ ನಡೆಸಿಕೊಡ್ತಾ ಇದ್ದೆವು" ಎಂದು ತಮ್ಮ ಪೊದರು ಮೀಸೆಯೊಳಗಿನಿಂದಲೇ ಗೊಣಗಿದರು.

ಹೀಗೆ ನಯಾ ಪೈಸಾದ ಸೃಷ್ಟಿಕರ್ತರೇ ನಾವು ಎಂಬಂತೆ ಹಲವಾರು ಮಂದಿ ನಮ್ಮ ಮುಖಕ್ಕೆ ಉಗಿದಂತೆ ಮಾತನಾಡಿದರು. ಆದರೆ ಹೋಟಲು ಮಾಲೀಕನೊಬ್ಬ ಮಾತ್ರ—ನಮ್ಮನ್ನು ತಪ್ಪಾಗಿ ತಿಳಿದುಕೊಂಡೋ ಏನೋ—ಬಹಳವಾಗಿ ಆದರಿಸಿದ ಆದರೆ ಬಲೀ ಕೊಡಲು ನಿಂತಿದ್ದ ಜನರ ಕೆಕ್ಕರು ಕಣ್ಣುಗಳನ್ನು ಕಂಡು ನಾವು ಬೇಗನೆ ಅಲ್ಲಿಂದೆದ್ದು ಬಂದೆವು ಮಾಲೀಕ ನಯಾಪೈಸೆಯನ್ನು ಹೊಗಳಿಯೇ ಹೊಗಳಿದ ಏಕೆಂದರೆ ಅವನ ತಿಂಗಳ ವರಮಾನ ಹತ್ತು ಸಾವಿರಕ್ಕೆ ಕಡಿಮೆಯಿಲ್ಲದಷ್ಟು ಏರಿರುವುದರಿಂದ ಆತ ಇನ್ನೂ ಒಂದು ಬಂಗಲೆ ಕೊಂಡುಕೊಂಡು ಅದನ್ನು ಬಾಡಿಗೆಗೆ ಕೊಡುವುದರಲ್ಲಿದ್ದಾನೆ. ಆ ಬಂಗಲೆಗೆ "ನಯಾ ಪೈಸಾ" ಎಂದಲ್ಲದಿದ್ದರೂ "ನಯಾ ಮಹಲ್"—ಎಂದಾದರೂ ಹೆಸರಿಟ್ಟಾನು.

—ರಾಮಿ.

—— ೦ ——

ಶಾ - ಸ್ತ್ರೀ - ಶಾಲೆ

(ವಿ ಸೀ. ಯವರಲ್ಲಿ ಕ್ಷಮೆ ಯಾಚಿಸಿ)

ಸೂರ್ಯ ಕಿರಣವ ಹಿಡಿದು ಅದ್ಭುತವ ತೋರಿದ್ದ !
ಬೆಳ್ಳುರಿಯ ಒಡಲೊಡೆದು ಬಣ್ಣಬಿಡಿಸಿದ್ದ !
ಕೆಂಪು, ಕಿತ್ತಳೆ, ಹಳದಿ, ಹಸುರು ನೀಲಿಯ ಬಿಲ್ಲ
ನಡುವೆ ಗಂಧಕ ರೇಖೆ, ಲವಣ ರೇಖೆಯನು
ಅಲೆಯಳೆದು ತೋರಿದ್ದ ಪಂಡಿತನು ಅಂದು
ತಾರೆಯದು, ಚಂದ್ರನದು, ಗ್ರಹಗಳದು ಎನುತ

ಉಬ್ಬಿದೆದೆಯದೆ ಹಬ್ಬ. ತೂಗಿರ್ಪ ಬಲ ಜಡೆ
ಕಿವಿಯ ಮುತ್ತಿಟ್ಟಿತ್ತು. ಎಡದ ಓಲೆಯಲಿ
ಪಸರಿಸಿತು ಶುಚಿ ಬೆಳಕು, ವರ್ಣ ಹರಿದಾ ಬೆಳಕು.
ಕೆಂಗೆನ್ನ ಮೇಲೆಲ್ಲಾ ಕುಣಿತಿತ್ತು ಬಿಲ್ಬಣ್ಣ
ಪುಳುಕದಲಿ ಕುಲುಕುತಲಿ ತಾರೆಯಳ ಚಂದ್ರಮುಳ
ಅಚ್ಚರಿಯ ಸವಿದನೋ ಶಾಲೆಯಲಿ ತರುಣ.

ತಿಳಿಯುವಜ್ಞರ ಮಬ್ಬು ಬೆಳಕಿಂದ ನಶಿದು
ಹರೆಯುವಕರ ಕೊಬ್ಬು ಬೆಳಕಿಂದ ಬೆಳೆದು.

ವೈದ್ಯರಲ್ಲಿ ವಿಷನಿಮಿಷಗಳು—

ಏನು ಡಾಕ್ಟ್ರೇ—ಈ ಸಾರಿ ನನ್ನ ಖಾಯಿಲೇಗೆ ಇಷ್ಟು ದುಬಾರಿ ಬಿಲ್ ಮಾಡಿಬಿಟ್ರಿ ?"

"ಏನ್ರೀ ದುಬಾರಿ ? ಈ ಸಾರಿ ನಿಮ್ಮ ಖಾಯಿಲೇ ಎಷ್ಟು ವಿಚಿತ್ರ ಗೊತ್ತೇ ? ಆ ದೊಡ್ಡ ಡಾಕ್ಟ್ರು ಎಷ್ಟು ಸೀಡಿಸಿದರು ಅಂತೀರಿ—ಈ ಕೇಸು ಪೋಸ್ಟು ಮಾರ್ಟಂ ಮಾಡಿದ್ರೇ ಆದರೆ ಎಷ್ಟೋ ಹೊಸಾ ವಿಷಯಗಳು ತಿಳಿಯುತ್ತೆ—ಅಂತ ? ಆದರೂ ನಾನು ಆ ಆಸೇನೆಲ್ಲಾ ಬಿಟ್ಟು ಔಷಧಿ ಕೊಟ್ಟಿದ್ದೇನೆ—ದುಬಾರಿ ಅಂತೀರಲ್ಲಾ !"

— ಕೇಫ.

ರಾಘಣ್ಣನ ರಥ

ರಾಘಣ್ಣನವರು ತಲೆಯಮೇಲೆ ಕೈಹೊತ್ತುಕೊಂಡು ಮನೆಯಮುಂದಿನ ಕಟ್ಟೆಯ ಮೇಲೆ ಕೂತಿದ್ದರು. ನಂದಗೋಕುಲದಂತಹ ಮನೆ ಕುರುಕ್ಷೇತ್ರವಾಗಿತ್ತು. 'ಮಕ್ಕಳೊಂದಿಗೆ ತುಂಬಿದ ಸಂಸಾರ ಇದ್ದರೆ ರಾಘಣ್ಣನಹಾಗೆ ಇರಬೇಕು' ಎಂದು ಆಚೀಚಿನ ಬೀದಿಯವರು ಹೊಟ್ಟೆಕಿಚ್ಚಿನಿಂದ ಹಲ್ಲುಕಚ್ಚಿದ್ದರು. ಆ ಹುಡುಗರ ಆಟ—ತಂದೆಯ ಪ್ರೀತಿ ಹೆಂಡ್ತಿಯ ಲೋಲಾಪ್ತಿ ಎಲ್ಲಾ ನೀರಲ್ಲಿ ಸಕ್ಕರೆ ಕರಗಿದಂತೆ ಪಾನಕವಾಗಿತ್ತು —ಆದರೇ............

ಕೈದರು ದೊಡ್ಡವರಾದರು—ಮನೆಗೆ ಸೊಸೆಯಂದಿರು ಬಂದರು—ಅಳಿಯಂದಿರು ನುಗ್ಗಿದರು—ಮೊಮ್ಮಕ್ಕಳು ಕಾಣಿಸಿಕೊಂಡರು—ಸಂಸಾರದ ರಥ ಎಳೆಯುವುದು ಕಷ್ಟವಾಯಿತು—ಮೂಲ ಉತ್ಸವಮೂರ್ತಿ ರಾಘಣ್ಣನವರನ್ನ ಕೂಡಿಸಿ ಮಕ್ಕಳೆಲ್ಲ ದಿಕ್ಕಿಗೊಬ್ಬರಂತೆ ಎಳೆದರು. ಮಕ್ಕಳು ಚಿಕ್ಕವರಾಗಿದ್ದಾಗ ಮುದ್ದಾಡಿದ್ದರು—ಈಗ ದೊಡ್ಡವರಾದಮೇಲೆ ವದ್ದಾಡಿದ್ದರು.

ರಥ ಸಾಗುವುದು ತುಂಬಾ ತಾಪತ್ರಯವಾಗಿತ್ತು. ದಾರಿಗಡ್ಡವಾಗಿ ಜನ ಬರುವರು. ಉತ್ಸವಮೂರ್ತಿಗೆ ಬಾಳೆಹಣ್ಣಿನ ಬದಲು ಸಿಪ್ಪೆ ಎಸೆಯುವರು—ಸಕ್ಕರೆಯಂತಹ ಸಂಸಾರ ಬೇವಿನಕಾಯಿ ಆಯಿತು.

ಇದಕ್ಕೆಲ್ಲ ಕಾರಣ ಅಚ್ಚಮ್ಮ, ಹಿರೀಸೊಸೆ. ತನ್ನ ಯಜಮಾನರಿಗೇ ಪ್ರತ್ಯೇಕವಾಗಿ ಕಾಫಿ—ಮೆಂತ್ಯದ ದೋಸೆ ಮಾಡಿಕೊಟ್ಟಳು—ಅನ್ನದಲ್ಲಿ ಮುಚ್ಚಿ ತುಪ್ಪ ಬಡಿಸಿದಳು. ಕಿರೇಸೊಸೆ ಅತ್ತೆಗೆ ಅಚ್ಚುಮೆಚ್ಚು ಕಿರೇಮಗನಿಗೆ ಹೆಂಡ್ತಿ ಅಚ್ಚುಮೆಚ್ಚು ಸರಿ ಅವರವರುಗಳು ಉಪಚಾರಮಾಡಿ ಒಬ್ಬರಿಗೊಬ್ಬರು ತುಪ್ಪ ಬಡಿಸಿಕೊಂಡರು. ಇನ್ನು ಮಗಳು-ಮಗಳ ಗಂಡ, ಮೊಮ್ಮಗ ಬಹಳ ಸೂಕ್ಷ್ಮಪ್ರಕೃತಿಯವರು-ಹಸುವಿನ ಹಾಲು ಹಸನ್ ಅಕ್ಕಿಯೇ ಆಗಬೇಕು. ಮಧ್ಯದ ಮಗ ಅವನ ಅಣ್ಣ ಅವರವರ ಹೆಂಡಿದಿರೊಡನೆ ವರಾಂಡಾ—ರೂಮು ಹಿಡಿದಿದ್ದರು. ಅಲ್ಲೇ ತಮತಮಗೆ ಬೇಕಾದ ಕಡ್ಲೆ ಉಸುಳಿ— ಚಿತ್ರಾನ್ನ ಮಾಡಿಕೊಂಡು ತಿನ್ನುವರು.

ಹೀಗಾಗಿ ರಾಘಣ್ಣನವರು ತಮ್ಮ ಮನೆ ಅಲ್ಲೋಲಕಲ್ಲೋಲವಾದದ್ದಕ್ಕೆ ತಲೆಯ ಮೇಲೆ ಕೈಹೊತ್ತು ಮನೆಯಲ್ಲಿ ಎಲ್ಲೂ ಜಾಗ ಸಿಕ್ಕದೆ ಹೊರಗಡೆ ಜಗುಲಿಯಮೇಲೆ ಕೂತಿದ್ದರು.

ಪಕ್ಕದಮನೆಯ ಪಾಪಯ್ಯ, ಶ್ರೀಯುತರನ್ನು ನೋಡಿ, ಮರುಕಪಟ್ಟು ವಿಚಾರಿಸಿ 'ಅಯ್ಯೋ ಪಾಪ' ಹೇಳಿಹೋಗುವುದು ಗೃಹಸ್ಥಧರ್ಮವೆಂದು ಮಾತಾಡಿಸಿದ.

"ರಾಘಣ್ಣೋರೇ ಆರೋಗ್ಯವೇ?"

"ಯಾರು?" ಎಂದು ಚಕಿತರಾಗಿ ಕೇಳಿದರು.

"ನಾನು ಪಾಪಯ್ಯ"

"ಪಾಪಯ್ಯ....ನಾನು ಪಾಪಿಯಯ್ಯ"

"ಬಿಡ್ತಿನ್ನಿ ರಾಘಣ್ಣೋರೇ— ಮಕ್ಕಳು— ಅಳಿಯಂದಿರು—.ಮೊಮ್ಮಕ್ಕಳು— ನಂದಗೋಕುಲದಂತಹ ಸಂಸಾರ ಇರೋವಾಗ ಪಾಪಿಗಳ್ಯಾಕೆ ಆಗ್ತೀರಿ ಪುಣ್ಯಾತ್ಮರು ನೀವು"

"ಪಾಪಯ್ಯಾ ವಿಷಯ ಹೀಗಿದೆ"–ಎಂದು ಪ್ರಾರಂಭಿಸಿ ತಮ್ಮನ್ನು ಜಗುಲಿಯ ಪಾಲಾಗುವಂತೆ ಮಾಡಿದ ತಮ್ಮ ಸಂಸಾರದ ಸದಸ್ಯರ ವರ್ತನೆಯ ವೈಖರಿಯನ್ನು ತೋಡಿಕೊಂಡು— ಒಡಲುರಿಯನ್ನು ಕೊಂಚ ಕಡಿಮೆಮಾಡಿಕೊಂಡರು. ಪಕ್ಕದಮನೆ ಪಾಪಯ್ಯನವರು ಅಯ್ಯೋ ಪಾಪ ಹೇಳಿ ಪಶ್ಚಾತ್ತಾಪದ ಮಾತಾಡಿ ಹೋಗಿಬಿಡಬಹುದಾಗಿತ್ತು. ಆದರೆ ಆತ ಆದರ್ಶವಾದಿ ಇಂತಹ ಪ್ರಸಂಗಗಳಿಗೆ ಸೂಕ್ತ ಪರಿಹಾರ ಸೂಚಿಸಿ ಪ್ರಯೋಗ ಫಲಕಾರಿಯೆ? ಎಂದು ಕಾದುನೋಡುವ. ಭಾವಿ ಆಳ ನೋಡಲು ಆತ ಯಾವಾಗಲೂ ಇನ್ನೊಬ್ಬರ ಮನೆ ಮಕ್ಕಳನ್ನೇ ಹುಡುಕುತ್ತಿದ್ದ.

ಈಗ ರಾಘಣ್ಣನವರ ಸಂಸಾರ ರಥ ಸುಸೂತ್ರ ಸಾಗಲು ತನ್ನ ಸಲಹೆ ಮುಂದೆ ಮಾಡಿದ.

"ರಾಘಣ್ಣೋರೇ— ನೀವು ಸ್ವಲ್ಪ ಆಲೋಚನೆಮಾಡಿನೋಡಿ, ನಾನು ಹೇಳೋ ಸಲಹೆ ಸೂಕ್ತವಾಗಿ ಕಂಡರೆ ಈ ಒಂದು ಪ್ರಯೋಗ ಯಾಕೆ ನೀವು ಮಾಡಿಬಿಡ ಬಾರದು?

"ಏನು ಪ್ರಯೋಗವೋ— ಏನೋ ಹೋಗ್ಲಿ ಬಿಡ್ರಿ ನಮ್ಮ ಗ್ರಹಚಾರ"

"ಹಾಗೆ ಅಂದುಕೊಂಡು ಜಗುಲಿ ಹಿಡಿದರೆ ಮನೆ ಯಜಮಾನ್ರು ಅನ್ನಿಸಿಕೊಂಡು ಅಧಿಕಾರ ಚಲಾಯಿಸ್ದೆ ಇದ್ರೆ ಆಗತ್ತೆ ...ನೀವು ನಿಮ್ಮ ಸಂತೆಯಂತಹ ಸಂಸಾರದಲ್ಲಿ ಶಾಂತಿ ನೆಲೆಸೊ ಏರ್ಪಾಟುಮಾಡಬೇಕಾದ್ದು ನನ್ನ ಹಿತದೃಷ್ಟಿಯಿಂದ....ಅರ್ಥವೆ?"

"ನಿಮ್ಮ ಹಿತದೃಷ್ಟಿ?.. ಹಾಗಂದ್ರೆ?"

"ನಿಮ್ಮನೆ ಪಕ್ಕದಮನೆ ವಾಸ ನಂದು ಅಂದಮೇಲೆ ನಿಮ್ಮನೆ ಕುರುಕ್ಷೇತ್ರದ ಗೊಂದಲ ನಮ್ಮ ಮನೇಲೇ ನಡೆದಹಾಗೆ ಆಗತ್ತೆ....ಛೆ— ನಿಮ್ಮ ಹಿರೇಮಗ ಅದೇನ್ರಿ ಹಾಗೆ ಅರಚ್ತಾನೆ....ನಿದ್ರೆಯೇ ಬರೊಲ್ಲ"

"ಕ್ಷಮಿಸಿ ಪಾಪಯ್ಯನೋರೆ ಹಿರೇಮಗ ಕೂಗೋದೇ ಇಲ್ಲ....ಆ ಕೂಗು ಹಿರೇ ಸೊಸೇದು....ಆಕೆ ಬಂದಮೇಲೆ ನಮ್ಮ ಹಿರೇಮಗನ ಬಾಯೇ ಹೋಗಿದೆ .."

"ನಾನು ಇನ್ನು ಸುಮ್ಮನೆ ಇರೋಕೆ ಆಗೋಲ್ಲ ಸೂಕ್ತ ಕ್ರಮ ತೊಗೊಬೇಕಾಗುತ್ತೆ...."

"ನೆರೆಹೊರ್ಕೆ—ಸಹಿಸಬೇಕು – ಈಗ ನಮ್ಮ ಕುರುಕ್ಷೇತ್ರದ ಜೊತೆ ನಿಮ್ಮ ರಾಮಾಯಣಾನೂ ನಾನು ಸಹಿಸ್ತಾ ಇಲ್ವೇ ..."

"ನಮ್ಮ ರಾಮಾಯಣ?"

"ಹೌದು ನಿಮ್ಮ ಮಗ ಹನುಮಂತು ನಮ್ಮ ಹಿತ್ತಲ ಬಾಳೆಗಿಡ ಮುರೀಲಿಲ್ವೆ? ... ನಿಮ್ಮ ಎರಡನೆ ಮಗ ಅಂಗದ ನಮ್ಮ ಮೊಮ್ಮಗನ ಕಿವಿ ಕಚ್ಚಿದ್ದು ಸುಳ್ಳೇ .. ಯಾತರದೊ ಮಾತಾಡ್ತಾರೆ ಜಾಂಬುವಂತನಹಾಗೆ....ಹೋಗ್ರೀ"

"ಕೋಪಮಾಡ್ಕೊಬೇಡಿ....ರಾಘಣ್ಣೊರೇ ಸಂಸಾರ ಅಂದಮೇಲೆ ಇಂಥಾ ಚಿಲ್ರೆ ಪಲ್ರೆ ತಕರಾರುಗಳು ಇದ್ದದ್ದೇ...."

"ಮತ್ತೇ ಹಾಗಬನ್ನಿ ದಾರೀಗೆ ಅದೇನೋ ಸೂಕ್ತಕ್ರಮ ಗಿಮ ಅಂದ್ರಲ್ಲಾ ಅದಕ್ಕೆ ನಾನು ಅಂದದ್ದು"

"ಅನ್ನಿ ಪರವಾಗಿಲ್ಲ.......ಅಂತೂ ನನ್ನ ರಾಜ್ಯಭಾರ ರಾಮರಾಜ್ಯ ಅಂತ ಒಪ್ಕೋತೀರೋ"

"ಒಪ್ಕೊಂಡೆ"

"ನಿಮ್ಮ ಮನೆಲೂ ಇದೇ ಸುವ್ಯವಸ್ಥೆ ಇರಬೇಕೂನ್ನೋದು ಒಪ್ಕೊತೀರೊ"

"ಒಪ್ಕೊಂಡೇಂತ ಇಟ್ಕೊಳ್ಳಿ"

"ಅಂದಮೇಲೆ ನನ್ನ ಸಲಹೆ ನೀವು ಯಾಕೆ ನಿಮ್ಮ ಸಂಸಾರಕ್ಕೂ ಅನ್ವಯಿಸಿ ಸುಖವಾಗಿರಬಾರದು?"

"ಅದೇನು ಸಲಹೆ ಅಪ್ಪಣೆಯಾಗಬೇಕು"

—ಎಂದಾಗ....ಪಾಪಯ್ಯ ರಾಘಣ್ಣನ ಪಕ್ಕದಲ್ಲಿ ಆತ್ಮೀಯವಾಗಿ ಕೂತು—ಅವನ ನಶ್ಯದ ಡಬ್ಬಿಯಿಂದಲೇ ಮೂಗನ್ನ ಸ್ವಚ್ಛವಮಾಡಿಕೊಂಡು, ತಮ್ಮ ಮನೆ ಬಾಗಿಲು ಮುಂದೆ ಮಾಡಿರುವುದನ್ನು ಧೃಡಪಡಿಸಿಕೊಂಡು ರಾಘಣ್ಣನ ಮನೆ ಮುಂಬಾಗಿಲನ್ನೂ ಮುಂದೆ ಮಾಡಿ ಹೇಳತೊಡಗಿದ.

"ರಾಘಣ್ಣೋರೇ ನಿಮಗೆ ಪ್ರಜಾರಾಜ್ಯ ಸೂತ್ರದಲ್ಲಿ ನಂಬಿಕೆ ಇದೆಯೊ?"

"ಇದೇಂತ ಇಟ್ಕೊಳ್ಳಿ"

"ಅದೇ ಸೂತ್ರದಮೇಲೆ ಸಂಸಾರ ನಡೆಸಿದರೆ ಸಂಸಾರ ರಾಜ್ಯದಲ್ಲಿ ಸುಖ ಗ್ಯಾರಂಟಿ"

"ಈ ತಂಟೆ ತಕರಾರಿಗೆ ಮಾರ್ಗವೇ ಇರೋಲ್ಲಾಂತಿರಾ?"

"ಎಲ್ಲಿ ಬಂತು—ಪ್ರತಿಯೊಬ್ಬನಿಗೂ ಒಂದೊಂದು ಜವಾಬ್ದಾರಿ ತಲೆಮೇಲೆ ಬಿದ್ದರೆ ಆಗ ಗೊತ್ತಾಗುತ್ತೆ...."

"ಈಗಲಾದರೂ ಏನಂತೀ ಎಲ್ಲಾ ಜವಾಬ್ದಾರಿ ಸಮೇತ ಅವರೆಲ್ಲಾ ನನ್ನತಲೆ ಮೇಲೆ ಬಿದ್ದಿಲ್ಲವೆ?"

"ನಾನು ಹೇಳೋದನ್ನ ಪರಾಂಬರಿಸಿ ಸ್ವಾಮೀ........ಈಗ ನಿಮ್ಮ ಮನೆ ಜನ ಸಂಖೆ ಎಷ್ಟು ಸ್ವಾಮಿ?"

"ಏಕ್‌ದಂ ಹಾಗೆ ಹೇಳೋಕೆ ಸಾಧ್ಯವೆ?....ಎಣಿಸಿನೋಡಬೇಕು"

"ಅಂದಾಜು"

"ನಾನೂ ...ಆಕೇ ...ರಾಮಿ—ಶಿವ—ಶಂಕರ—ಲಕ್ಷ್ಮಣ—ಮೂರ್ತಿ—ರುಕ್ಕು—ಪಾರ್ವತಿ—ಈಶ್ವರಯ್ಯ...ಸುಭದ್ರೆ—ಅವನ ಮಗಳು—ಮಗಳ ಗಂಡ—ಮತ್ತೇ ಸುಂದರಮೂರ್ತಿ—ಕನಕಲಕ್ಷ್ಮಿ—ವಿಶಲ....ರಾಮ್ ಚಿಕ್ಕಪ್ಪ—ಸರಸು—ತಂಗಚ್ಚಿ—ಪುಟ್ಟು—ಟ್ರಾಮಿ—ಜಾನಿ...."

"ಜಾನಿ?"

"ನಮ್ಮ ನಾಯೀ....ಎಲ್ಲಾ ಸೇರಿ ಇಪ್ಪತ್ನಾಲ್ಕು ಇಪ್ಪತ್ತೈದೂನ್ನಿ"

"ಸರಿ ನಮ್ಮನೆಗಿಂತ ನಾಲ್ಕೇ ಜನ ಹೆಚ್ಚು—ಇರ್ಲಿ—ಈಗ ಮನೆಗೆ ಮುಖ್ಯರು ಯಾರು ರಾಘಣ್ಣಾ?"

"ಅವಳೇ ನನ್ನಾಕೇ...."

"ನಮ್ಮನೆಗೂ ನಿಮ್ಮನೆಗೂ ಒಂದೇ ವ್ಯತ್ಯಾಸ, ಅಲ್ಲಿ ನಾನು ಯಜಮಾನ, ಇಲ್ಲಿ ನಿಮ್ಮ ಮನೆಯವರದ್ದು ಯಜಮಾನ್ಕೆ....ಸರಿ ಇರ್ಲಿ—ಓಟರ್ಸ್‌ಲಿಸ್ಟ್‌ನಹಾಗೆ ನಿಮ್ಮ ಸಂಸಾರದ ಸದಸ್ಯರದು ಒಂದು ಪಟ್ಟಿಮಾಡಿ. ಒಂದು ನಿರ್ದಿಷ್ಟ ತಾರೀಖಿನ ದಿನ ಎಲೆಕ್ಷನ್ ನಡಿಸಿ"

"ಮನೇಲೇ ಎಲೆಕ್ಷನ್ನೇ"

"ಅದೇ ಕೇಳಿ....ನಿಮ್ಮ ಮನೆ ಆಡಳಿತ ನಡೆಸೋಕೆ ಮನೆಯವರಿಂದಲೇ ಆರಿಸಿ ಬಂದ ಪ್ರತಿನಿಧಿಗಳಿದ್ದರೆ ಯಾತಕ್ಕೆ ಕುರುಕ್ಷೇತ್ರವಾಗುತ್ತೆ?"

“ಸರಿ ಆ ಸದಸ್ಯರಲ್ಲಿ ಮಂತ್ರಿವರ್ಗ ಆಯಿಸೋದೂನ್ನಿ”

“ಕರೆಕ್ಟ್.... ಪರವಾಗಿಲ್ಲ ನೀವು ಒಂದೊಂದುಸಲ ಸರಿಯಾಗಿ ಗೆಸ್‌ಮಾಡ್ತೀರ ... ನೀವು ಯಜಮಾನ್ರು ಪ್ರೆಸಿಡೆಂಟಾಗಿರೋದು ಧರ್ಮ”

“ಅದು ಸಾಧ್ಯವಿಲ್ಲ ಪಾಪಯ್ಯ........ನಾನು ಪ್ರೆಸಿಡೆಂಟ್ ಆಗೋಕೆ ನಮ್ಮ ಯಜಮಾನಿ ಬಿಡಬೇಕಲ್ಲ....”

“ನಮ್ಮನೆಲೂ ಇದೇ ಗೋಳು ನೋಡಿ....ಅವಳಿಗೆ ಎಲ್ಲಾ ಪವರ್ರೂ ಕೊಟ್ಟು ಮುಖ್ಯಮಂತ್ರಿಮಾಡಿ—ನಿನ್ನ ಸಲಹೆ—ನಿನ್ನ ಆರ್ಡರಿಗೆ ನಾನು ಸಹಿ ಹಾಕೋ ಪ್ರೆಸಿಡೆಂಟೂಂತ ಸಮಾಧಾನಮಾಡಿದಮೇಲೆ ನನಗೆ ಪ್ರೆಸಿಡೆಂಟಾಗೋಕೆ ಬಿಟ್ಟಳು....”

“ನಾನೂ ಕೇಳಿನೋಡ್ತಿನಿ....ಮೊದಲು ಅವಳು ಎಲೆಕ್ಷನ್ನಲ್ಲಿ ಗೆಲ್ಲಲಿ ಆಮೇಲೆ ತಾನೆ ...”

“ಅವರುಗಳು ಗೆದ್ದುಬಿಡ್ತಾರ್ರೀ....ನಾವುಗಳೇ ಠೇವಣಿ ಕಳ್ಕೊಳ್ಳೊದು.... ... ಅದಕ್ಕೆ ಪ್ರೆಸಿಡೆಂಟು ‘ಸೆಲ್ಫ್ ನಾಮಿನೇಟೆಡ್ ಆಸ್ ಯೆ ಸ್ಪೆಶಲ್ ಕೇಸ್’ ಅಂತ ರೂಲು ಮಾಡ್ಕೊಳ್ಳಿ ಏನೀಗ....”

“ಕಾನ್ಸ್ಟಿಟ್ಯೂಷನ್‌ನಲ್ಲಿ ಅವಕಾಶವಿರಬೇಕಲ್ಲಾ”

“ಅದಕ್ಕೆ ಹೇಳಿದ್ದು As a special case ಅಂತ ಕೊಕ್ಕೆಹಾಕಿ ಯಜಮಾನಿಕೆ ದಕ್ಕಿಸಿಕೊಳ್ಳಿ ಅಂತ.”

“ಸರಿ ಪ್ರಯತ್ನಮಾಡೋಣ—ಆಮೇಲೆ”

“ಆಮೇಲೇನು ಸರ್ಕಾರ ಗಲಾಟೆ ಇಲ್ಲದೆ ನಡೆಯುತ್ತೆ....”

“ನಿಸೂರಾಗಿ ಹೇಳಿಬಿಡ್ತೀರಿ ಮಾಡೋದು ಕಷ್ಟವಿದೆ.”

“ಏನು ಕಷ್ಟ.... ನಿಮ್ಮ ಯಜಮಾನ್ತಿಗೆ—ಮುಖ್ಯ ಮಂತ್ರಿ ಪದವಿ ತಲೆಗೆ ಕಟ್ಟಿ ....ಹಿರೀ ಮಗನಿಗೆ ಗಂಟಲೇ ಇಲ್ಲಾಂದ್ರಿ ಅವನಿಗೆ ಯಾವ ಇಲಾಖೆ?”

“ಅವನು ಶುದ್ಧ ಶುಂಠಿಕಾಯಿ ಅಪ್ರಯೋಜಕ ಅವನಿಗೆ Homeಏ ಸರಿ.. ಪೋಲೀಸ್ ಅಲ್ಲದೆ ಬೇರ್‍ಯಾವುದೂ ಸರಿಹೋಗೊಲ್ಲ ”

“ಸರಿ—ಹಣ ಕಾಸಿನ ಬಾಬತ್ತು?”

“ಅದು ಆಗಲೇ ನನ್ನ ವೈಫೇ ನೋಡ್ತಿದ್ದಾಳೆ--ಹ್ಯಾಗೂ ಮುಖ್ಯ ಮಂತ್ರಿ ಅದನ್ನೂ ಅವಳೇ ನೋಡ್ಕೊಳ್ಳಿ.”

“ವೆರಿಗುಡ್ ....ಆರೋಗ್ಯ ಮಂತ್ರಿ?”

"ನನ್ನ ಮಗಳು ಸದಾ ಅಸ್ತವಾ ಅವಳಿಗೆ; ಅಕೆಯೇ ಸರಿ ಆ ಜಾಗಕ್ಕೆ."

"ಇನ್ನು ನ್ಯಾಯಾಂಗ ನಿಮ್ಮ ಮೂರನೆ ಮಗ ಮೂರ್ತಿಗೆ ಕೊಡಿ—"

ಅವನಿಗೆ ಕೊಟ್ಟರೆ ತೋಳನಿಗೆ ಕುರಿಕಾಯಿ ಅಂದ ಹಾಗಾದೀತು—ಅವನು ಕೊಂಚ ನ್ಯಾಯ ದೇವರು—ಸತ್ಯ ಲೆಕ್ಕಾಚಾರ—ಅಂದರೆ ಆಸಕ್ತಿ ಅಂಥವನು ನ್ಯಾಯ ಮಂತ್ರಿ ಆಗಲು ಹೇಗೆ ಸಾಧ್ಯ?"

"ಅವನಿಗೆ ಬೇಡ ಶಂಕರನಿಗೆ ಕೊಡಿ...."

"ಪರವಾಗಿಲ್ಲ ಅವನು ನಿಭಾಯಿಸ್ತಾನೆ....ಇನ್ನು ನನ್ನ ದೊಡ್ಡ ಚಿಂತೆ ಅಂದರೆ ಆಹಾರ ಮಂತ್ರಿ ಯಾರು?...."

"ಅದನ್ನೂ ಮುಖ್ಯ ಮಂತ್ರಿಗಳ ತಲೆಗೇ ಕಟ್ಟಿ."

"ಅವರನ್ನ ಬಿಟ್ಟರೆ ರಾಮ್ ಚಿಕ್ಕಪ್ಪನಿಗೆ ಕೊಡಬೇಕು—ಯಾಕೇಂತೀರೋ.... ಅವನ್ನ ಕಂಡರೆ ಹುಡುಗರಿಗೆ ಕೊಂಚ ಭಯ ತಿನ್ನೋದರಲ್ಲಿ ಅವನು ಹತೋಟಿಲಿ ಇಡಬಹುದು."

"ಇನ್ನುಳಿದ ಚಿಲ್ರೆ—ಮುಜರಾಯಿ ಇಲಾಖೆ ನಿಮ್ಮ ಅಕ್ಕ ಸುಭದ್ರೆಗೆ ಕೊಡಿ ದೇವರು ದಿಂಡ್ರೂಂತ ಇರತ್ತೆ ಮುದುಕಿ...."

"ಇದೆಲ್ಲಾ ಸರೀ ...ಆದರೆ ಮಂತ್ರಿಗಳ ಆಯ್ಕೆ ಮುಖ್ಯ ಮಂತ್ರೀದಲ್ವೆ? ಅವಳು ಕೊಟ್ಟ ಸಂಪುಟಕ್ಕೆ ನಾನು ಅಸ್ತು ಅನ್ನೋದೆ ನಿಯಮ ಅಲ್ವೆ?"

"ಆದರೂ ಪ್ರೆಸಿಡೆಂಟೂಂದ ಮೇಲೆ ನಿಮ್ಮ ಸಲಹೇನೂ ಕೇಳಬಹುದು..."

"ಪಾಪಯ್ಯಾ ನೀವು ಹಾಗೇ ಮಾಡಿದ್ದೀರ ನಿಮ್ಮ ಮನೇಲಿ"

ಎಲೆಕ್ಷನ್ನೆಲ್ಲಾ ಆಗಿದೆ....ಅವಳೇ ಪ್ರೆಸಿಡೆಂಟನ ಹಾಗೆ ಆಡ್ತಾಳೆ."

"ನಮ್ಮ ಮನೇಲೂ ಇದೇ ಗೋಳಾದ್ರೆ?"

"ಅದಕ್ಕೆ ಈ ಪ್ರಯೋಗ ನಡೆಸಿ ನೋಡೀಂತ ಹೇಳಿದ್ದು....ನಿಮ್ಮ ಮನೇಲಿ ಯಶಸ್ವಿಯಾಗಬಹುದು"

"ನಾನೇನೊ ರೆಡಿ ಅವಳು—ಮಕ್ಕಳು ಸೊಸೆಯಂದಿರು ಅಸ್ತು ಅನ್ನಬೇಕಲ್ಲಾ ಹೂಂ ನೋಡ್ತೀನಿ ಮನೇಲ್ಲಿ ಕೇಳಿ ಹೇಳ್ತೀನಿ....ಆದರೆ ಜಾರಿಗೆ ತರ್ತೀನಿ "

—ಎಂದು ಊಟಕ್ಕೆ ಹೋದರು. ಪಾಪಯ್ಯ ಪೆಚ್ಚಾಗಿ ಮನೆಗೆ ಹೋದರು.

ದಾಶರಥಿ ದೀಕ್ಷಿತ್.

— o —

ಕೊರವಂಜಿ

ಬಳೇಪೇಟೆ : : ಬೆಂಗಳೂರು 2

ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.


ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦
ಬಿಡಿ ಪ್ರತಿ ಕೇವಲ ಆಣೆ ೦—೪—೦

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO. BANGALORE MADRAS MADURAI BOMBAY



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಾಧುರವಾಗಿಯೂ ಇದೆ.

★ ★

ತಯಾರಕರು :

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,

ಮಲ್ಲೇಶ್ವರಂ — — — ಬೆಂಗಳೂರು 3.